*Version 2*

**ಮಧ್ಯಸ್ಥ ದರ್ಶನ ಸಹ ಅಸ್ತಿತ್ವವಾದದ ಮೇಲೆ ಆಧಾರಿತ**

# ವಿಕಲ್ಪ

## ಯಾಕೆ? ಹೇಗೆ?

**ಮುಗಲೂರು ಅಗ್ರಹಾರ ನಾಗರಾಜ್**

(ಮೂಲತಃ ಹಿಂಧಿ ಭಾಷೆಯಲ್ಲಿ)

ಸಂಯುಕ್ತ ಹಿಂಧಿ-ಕನ್ನಡ ಸಂಸ್ಕರಣ

ದಿವ್ಯ ಪಥ ಸಂಸ್ಥಾನ

ಅಮರ್ಕಂಟಕ್

*Version 2*

ಭಾಷಾಂತರಕಾರರ ಟಿಪ್ಪಣಿ

ಮಧ್ಯಸ್ಥ ದರ್ಶನದ ಗ್ರಂಥಗಳು ಮೂಲತಃ ಹಿಂದಿ ಭಾಷೆಯಲ್ಲಿವೆ. ಪೂಜ್ಯ ಶ್ರೀ ಎ. ನಾಗರಾಜ್ ನವರ ಸಲಹೆ ಹಾಗು ಪ್ರೇರಣೆಯಿಂದ ನಾನು ಇದರ ಕನ್ನಡ ಭಾಷಾಂತರ ಮಾಡಲಾರಂಭಿಸಿದೆ. ಮಧ್ಯಸ್ಥ ದರ್ಶನದ ಹಾಗು ಅದರ ಪರಿಷ್ಕರಣೆಯ ಅಧಿಕಾರ ಶ್ರೀ ಎ. ನಾಗರಾಜ್ ನವರದಾಗಿದ್ದು, ಈ ಭಾಷಾಂತರದ ಜವಾಬ್ದಾರಿಯನ್ನು ನಾನು ವಹಿಸುತ್ತೇನೆ. ಕನ್ನಡ ಭಾಷೆಯಲ್ಲಿ ನನ್ನ ಸಾಮರ್ಥ್ಯ ಸಾಧಾರಣ. ಮಧ್ಯಸ್ಥ ದರ್ಶನದ ವಿಧ್ಯಾರ್ಥಿಯಾಗಿ, ಇದನ್ನು ನಾನು ನನ್ನ ಅಧ್ಯಯನದ ಕ್ರಮದಲ್ಲಿ ಒಂದು ಸಹಾಯಕ ಹಾಗು ಪುಷ್ಟಿದಾಯಕ ಅಭ್ಯಾಸವೆಂದು ಪರಿಗಣಿಸುತ್ತೇನೆ. ಈ ಭಾಷಾಂತರದಲ್ಲಿ ಪರಿಷ್ಕರಣೆಗೆ ಅವಕಾಶವಿದೆ. ನನ್ನ ಸ್ವಂತ ಅಧ್ಯಯನ ಮುಂದುವರದಂತೆ ಹಾಗು ಕನ್ನಡ ಭಾಷೆಯಲ್ಲಿ ವ್ಯಕ್ತ ಪಡಿಸುವ ಸಾಮರ್ಥ್ಯೇಯಲ್ಲಿ ಸುಧಾರಣೆ ಆದಂತೆ ಇದರಲ್ಲಿ ಪರಿಷ್ಕರಣೆ ಆಗುತ್ತದೆ. ಮಧ್ಯಸ್ಥ ದರ್ಶನದಲ್ಲಿ ಅಧ್ಯಯನ ರತರಾದವರು ಹಾಗು ಈ ಭಾಷಾಂತರ ಕಾರ್ಯವನ್ನು ಪಠಿಸುವವರು, ಶಿಕ್ಷಣದಲ್ಲಿ ಪ್ರಯೋಗಿಸುವವರು, ನೀಡುವ ಆಲೋಚನೆ ಹಾಗು ಸಲಹೆಯ ಆಧಾರದಮೇಲೆ ಇದರ ಪರಿಷ್ಕರಣವಾಗುತ್ತಲಿರುತ್ತದೆ. ಈ ಭಾಷಾಂತರದಿಂದ ಶ್ರೀ ಎ. ನಾಗರಾಜ್ ಪ್ರತಿಪಾದಿಸಿರುವ ಮಧ್ಯಸ್ಥ ದರ್ಶನದ ಮೂಲ ಪ್ರತಿಪಾದನೆಯನ್ನು ಕನ್ನಡಭಾಷಿಯರಿಗೆ ಸುಲಭಸಾಧ್ಯವಾಗಲೆಂದು ನಾನು ಆಶಿಸುತ್ತೇನೆ.

ಗೌರಿ ಶ್ರೀಹರಿ
(ಅಮರ್ಕಂಟಕ್)
gowrisrihari@gmail.com

ಹೆಚ್ಚು ಮಾಹಿತಿಗೆ www.madhyasth-darshan.info ನೋಡಿ

*The final version will have the original Hindi text along with the kannda text. This book is to be always read with the original in Hindi. Due to technical reasons the Hindi version has not been incorporated here. The original book in Hindi is provided in the zip file. Please download it and read it along with the kannda version.*

*ಅಂತಿಮ ಸಂಸ್ಕರಣವು ಕನ್ನಡ ಭಾಷೆಯ ಪಠ್ಯದೊಂದಿಗೆ ಮೂಲ ಹಿಂದಿ ಪಠ್ಯವನ್ನು ಹೊಂದಿರುತ್ತದೆ. ಈ ಪುಸ್ತಕವನ್ನು ಯಾವಾಗಲು ಮೂಲ ಹಿಂದಿ ಭಾಷೆಯ ಪುಸ್ತಕದ ಜೊತೆ ಓದುವುದೇ ಉತ್ತಮ. ತಾಂತ್ರಿಕ ಕಾರಣಗಳಿಂದ ಮೂಲ ಹಿಂದಿ ಪಠ್ಯವನ್ನು ಇಲ್ಲಿ ಅಳವಡಿಸಲಾಗಿಲ್ಲ. ಹಿಂದಿ ಭಾಷೆಯ ಮೂಲ ಪುಸ್ತಕವನ್ನು ಜಿಪ್ ಫೈಲ ನಲ್ಲಿ ಒದಗಿಸಲಾಗಿದೆ. ದಯವಿಟ್ಟು ಅದನ್ನು ಡೌನ್ಲೋಡ್ ಮಾಡಿ ಅದನ್ನು ಕನ್ನಡ ಪುಸ್ತಕದೊಂದಿಗೆ ಓದಿ.*

ಮಾನವ ಬಂಧುಗಳ ಸನ್ನಿಧಿಯಲ್ಲಿ ಅರಿಕೆ,

ಇದುವರಿಗೆ ಗತಕಾಲದಿಂದ ನಡೆದು ಬರುತ್ತಿರುವ ಈಶ್ವರವಾದ ಮತ್ತು ಭೌತಿಕವಾದದ ದೃಷ್ಟಿಯಿಂದ ಮಾನವನ ಅಧ್ಯಯನ ಸಂಪನ್ನವಾಗಲಿಲ್ಲ. ಇದಕ್ಕೆ ವಿಕಲ್ಪವಾಗಿ ಅಸ್ತಿತ್ವ ಮೂಲಕ ಮಾನವ ಕೇಂದ್ರಿತ ಚಿಂತನವಿದೆಯೆಂದು ಸೂಚಿಸುತ್ತಾ ಪ್ರಸನ್ನತೆಯನ್ನು ಅನುಭವಿಸುತ್ತಿದ್ದೇನೆ. ಮಧ್ಯಸ್ಥ ದರ್ಶನ ಸಹ ಅಸ್ತಿತ್ವದಲ್ಲಿ, ಅಸ್ತಿತ್ವದಿಂದ, ಅಸ್ತಿತ್ವಕ್ಕೆ, ಮಾನವನ ಅಧ್ಯಯನ ಸಂಭವನೀಯವಾಗಿದೆ.

ಈ ವಿಕಲ್ಪದಲ್ಲಿ, ಮಾನವನ ಅಧ್ಯಯನ ಮಾನವ ಚೇತನ ಸಹಿತ ಮೌಲ್ಯ ಶಿಕ್ಷಣ ವಿಧಿಯಿಂದ ಸರ್ವ ಸುಲಭವಾಗುವ ಎಲ್ಲಾ ವೀಕ್ಷಣೆ, ಪರೀಕ್ಷಣೆ, ಸರ್ವೇಕ್ಷಣೆ ಸಂಪನ್ನವಾಗಿದೆ ಎಂಬುವ ಮಾತನ್ನು ತಿಳಿಸಲು ಪ್ರಯತ್ನಿಸಲಾಗಿದೆ. ಹೀಗಿರುವ ಕೇಂದ್ರಗಳಲ್ಲಿ ಒಂದು ಕೇಂದ್ರ ' ಅಭ್ಯುದಯ್ ಸಂಸ್ಥಾನ್ ' ಚತ್ತೀಸ್ಗಡ ಸೀಮೆಯಲ್ಲಿ ಕಾರ್ಯನಿರತವಾಗಿದೆ.

ಈ ಸೂಚನೆಯಲ್ಲಿ, ಸರ್ವ ಮಾನವ ಅರಿವುಳ್ಳವವನಾಗಿ ನ್ಯಾಯದಿಂದ ಬಾಳಬಹುದು, ಪ್ರತ್ಯೇಕ ಕುಟುಂಬ ಸಮಾಧಾನ - ಸಮೃದ್ಧಿಯಿಂದ ಬಾಳಬಹುದು ಎಂಬುವ ಮಾತನ್ನು ಪ್ರಸ್ತುತಗೊಳಿಸುತ್ತಿದ್ದೇನೆ. ಈ ಶಿಕ್ಷಣ ವಿಧಿಯಿಂದ ಸರ್ವ ಸುಲಭವಾಗುವ ವ್ಯವಸ್ಥೆಯಿದೆ. ನೀವು ನಿಮ್ಮ ಸದ್ವಿವೇಕಪೂರ್ವಕ ಪ್ರಸ್ತುತ ಸೂಚನೆಗಳಿಂದ ತಿಳಿವಳಿಕೆ ಪಡೆಯುತ್ತೀರವೆಂಬುವ ವಿಶ್ವಾಸವಿದೆ.

ನಿಮ್ಮ

ಎ. ನಾಗರಾಜ್

ಪ್ರಾಣೇತ

ಮಧ್ಯಸ್ಥ ದರ್ಶನ ಸಹ ಅಸ್ತಿತ್ವವಾದ

ದಿವ್ಯ ಪಥ ಸಂಸ್ಥಾನ

ಭಜನಾಶ್ರಮ, ಅಮರ್ಕಂಟಕ್

ಜಿಲ್ಲೆ - ಶಹಡೋಲ್ (ಮ. ಪ್ರ.)

## ವಿಕಲ್ಪ (ಅಸ್ತಿತ್ವ ಮೂಲಕ ಮಾನವ ಕೇಂದ್ರಿತ ಚಿತನ)

1. ಅಸ್ಥಿರತೆ, ಅನಿಶ್ಚಯತೆ ಮೂಲಕ ಭೌತಿಕ ರಾಸಾಯನಿಕ ವಸ್ತು ಕೇಂದ್ರಿತ ವಿಚಾರ ಉಪನಾಮ ವಿಜ್ಞಾನ ವಿಧಿಯಿಂದ, ಮಾನವನ ಅಧ್ಯಯನ ಸಾಧ್ಯವಾಗಲಿಲ್ಲ. ರಹಸ್ಯ ಮೂಲಕ ಆದರ್ಶವಾದ ಚಿಂತನ ವಿಧಿಯಿಂದಲೂ ಮಾನವನ ಅಧ್ಯಯನ ಸಾಧ್ಯವಾಗಲಿಲ್ಲ. ಈ ಎರಡೂ ಪ್ರಕಾರದ ವಾದಗಳಲ್ಲಿ ಮಾನವನನ್ನು ಜೀವವೆಂದು (ಪ್ರಾಣಿಯೆಂದು) ಕರೆದಿದ್ದಾರೆ.

ವಿಕಲ್ಪದ ರೂಪದಲ್ಲಿ ದೊರೆತಿರುವ ಅಸ್ತಿತ್ವ ಮೂಲಕ ಮಾನವ ಕೇಂದ್ರಿತ ಚಿಂತನ ವಿಧಿಯಿಂದ 'ಮಧ್ಯಸ್ಥ ದರ್ಶನ್, ಸಹ ಅಸ್ತಿತ್ವವಾದ್' (ಮಧ್ಯಸ್ಥ ದರ್ಶನ ಸಹ ಅಸ್ತಿತ್ವವಾದ), ಇದರಲ್ಲಿ ಮಾನವನನ್ನು ಜ್ಞಾನಾವಸ್ಥೆಯಲ್ಲಿರುವಂತೆ ಗುರುತಿಸಲಾಗಿದೆ ಹಾಗು ಮತ್ತವರಿಗೆ ಗುರುತುಪಡಿಸಲಾಗಿದೆ.

ಮಧ್ಯಸ್ಥ ದರ್ಶನದ ಅನುಸಾರ ಮಾನವನೇ ಜ್ಞಾತ (ತಿಳಿದುಕೊಳ್ಳುವವನು), ಸಹ ಅಸ್ತಿತ್ವ ರೂಪದಲ್ಲಿ ಅಸ್ತಿತ್ವವೇ ತಿಳಿಯಲು, ನಂಬಲು ಯೋಗ್ಯವಾದ ವಸ್ತು, ಅಂದರೆ ತಿಳಿದುಕೊಳ್ಳುವ ಸಂಪೂರ್ಣ ವಸ್ತು. ಇದೇ ದರ್ಶನ ಜ್ಞಾನ, ಇದರ ಸಹಿತ ಜೀವನ ಜ್ಞಾನ ಮತ್ತು ಮಾನವೀಯತೆ ಪೂರ್ಣ ನಡತೆಯ ಜ್ಞಾನದ ಸಹಿತ ಸಹ ಅಸ್ತಿತ್ವ ಪ್ರಮಾಣಿತವಾಗುವ ವಿಧಿ ಅಧ್ಯಯನಗಮ್ಯವಾಗಿದೆ.

ಅಸ್ತಿತ್ವ ಮೂಲಕ ಮಾನವ ಕೇಂದ್ರಿತ ಚಿಂತನ ಜ್ಞಾನ, ಮಧ್ಯಸ್ಥ ದರ್ಶನ, ಸಹ-ಅಸ್ತಿತ್ವವಾದ - ಶಾಸ್ತ್ರದ ರೂಪದಲ್ಲಿ ಅಧ್ಯಯನಕ್ಕೆ ಮಾನವನ ಸಮ್ಮುಖ ನನ್ನಿಂದ ಪ್ರಸ್ತುತ ಪಡಿಸಲಾಗಿದೆ.

2. ಅಸ್ತಿತ್ವ ಮೂಲಕ ಮಾನವ ಕೇಂದ್ರಿತ ಚಿಂತನದ ಮುನ್ನ ನನ್ನ (ಎ. ನಾಗರಾಜ್, ಅಗ್ರಹಾರ ನಾಗರಾಜ್, ಹಾಸನ ಜಿಲ್ಲೆ, ಕರ್ನಾಟಕ ಪ್ರದೇಶ, ಭಾರತ) ದೀಕ್ಷೆ ಅಧ್ಯಾತ್ಮವಾದ ಜ್ಞಾನ, ವೇದ ವಿಚಾರದ ಉಪಾಸನ ಕರ್ಮದಿಂದ ಪ್ರಾರಂಭವಾಯಿತು.

3. ವೇದಾಂತದ ಅನುಸಾರ ಜ್ಞಾನ 'ಬ್ರಹ್ಮ ಸತ್ಯ ಜಗತ್ತು ಮಿಥ್ಯ' ಆದರೆ ಬ್ರಹ್ಮದಿಂದ ಜೀವ ಜಗತ್ತು ಉತ್ಪತ್ತಿಯಾಗಿದೆಯೆಂದು ಹೇಳಿದ್ದಾರೆ.

- ಉಪಾಸನ:- ದೇವಿ ದೇವತೆಗಳ ಸಂದರ್ಭದಲ್ಲಿ
- ಕರ್ಮ :- ಸ್ವರ್ಗ ದೊರಕುವ ಎಲ್ಲಾ ಕರ್ಮಗಳು (ಭಾಷೆಯ ರೂಪದಲ್ಲಿ)
- ಮನು ಧರ್ಮ ಶಾಸ್ತ್ರದಲ್ಲಿ :- ನಾಲ್ಕು ವರ್ಣ ನಾಲ್ಕು ಆಶ್ರಮಗಳ ನಿತ್ಯ ಕರ್ಮ ಪ್ರಸ್ತಾಪಿಸಿದೆ.
- ಕರ್ಮ ಖಾಂಡಗಳಲ್ಲಿ :- ಗರ್ಭ ಸಂಸ್ಕಾರದಿಂದ ಮೃತ್ಯು ಸಂಸ್ಕಾರದ ವರಗೆ ಹದಿನಾರು ಪ್ರಕಾರದ ಕರ್ಮ ಖಾಂಡ ಮಾನ್ಯವಾಗಿದೆ ಮತ್ತು ಅವುಗಳ ಕಾರ್ಯಕ್ರಮಗಳಿವೆ.

ಇವೆಲ್ಲರ ಅಧ್ಯಯನದನಂತರ ನನ್ನ ಮನಸ್ಸಿನಲ್ಲಿ ಉದ್ಭವಿಸಿದ ಪ್ರಶ್ನೆಗಳೇನೆಂದರೆ -

4. ಸತ್ಯಂ ಜ್ಞಾನಂ ಅನಂತಂ ಬ್ರಹ್ಮ, ಇದರಿಂದ ಉತ್ಪನ್ನವಾಗಿರುವ ಜೀವ ಜಗತ್ತು ಮಿಥ್ಯ ಹೇಗೆ? ತತ್ಕಾಲದ ವೇದಜ್ಞಾನಿಗಳು ಮತ್ತು ವಿದ್ವಾಂಸರ ಜೊತೆ ಜಿಜ್ಞಾಸ ತೋರುವ ಕ್ರಮದಲ್ಲಿ ನನಗೆ :-

ಸಮಾಧಿ ಸ್ಥಿತಿಯಲ್ಲಿ ಅಜ್ಞಾತ ಜ್ಞಾತವಾಗುವ ಆಶ್ವಾಸನೆ ಸಿಕ್ಕಿತು. ಶಾಸ್ತ್ರದಲ್ಲೂ ಇದರ ಸಮರ್ಥನೆ ಇದ್ದು, ಇದರ ಆಧಾರದ ಮೇಲೆ ನಾನು ಸಾಧನೆ, ಸಮಾಧಿ, ಸಂಯಮ ಕಾರ್ಯವನ್ನು ಸಾಧಿಸಲು ಸ್ವೀಕರಿಸಿದೆ. ನಾನು ಸಾಧನೆ, ಸಮಾಧಿ, ಸಂಯಮ ಸ್ಥಿತಿಯಲ್ಲಿ ಸಂಪೂರ್ಣ ಅಸ್ತಿತ್ವ ಸಹ ಅಸ್ತಿತ್ವದಲ್ಲಿರುವ ರೂಪವನ್ನು ಅಧ್ಯಯನ, ಅನುಭವಪೂರ್ಣ ವಿಧಿಯಿಂದ ಅರಿವನ್ನು ಪ್ರಾಪ್ತಿಸಿದೆ, ಇದರ ಫಲಸ್ವರೂಪ, ಮಧ್ಯಸ್ಥ ದರ್ಶನ ಸಹ ಅಸ್ತಿತ್ವವಾದ ವಾಙ್ಗಮಯ ರೂಪದಲ್ಲಿ  ವಿಕಲ್ಪ ಪ್ರಕಟವಾಯಿತು.

5. ಆದರ್ಶವಾದ ಶಾಸ್ತ್ರಗಳ ಅನುಸಾರ - ರಹಸ್ಯ ಮೂಲಕ ಈಶ್ವರ ಕೇಂದ್ರಿತ ಚಿಂತನ ಜ್ಞಾನ ಹಾಗು ಪರಂಪರೆಯ ಅನುಸಾರ ಜ್ಞಾನ ಅವ್ಯಕ್ತ ಅನಿರ್ವಚನೀಯ.
ವಿಕಲ್ಪದ ಅನುಸಾರ - ಜ್ಞಾನ, ವ್ಯಕ್ತ, ವಚನೀಯ, ಅಧ್ಯಯನ ವಿಧಿಯಿಂದ ಬೋಧಗಮ್ಯ, ವ್ಯವಹಾರ ವಿಧಿಯಿಂದ ಪ್ರಮಾಣ ಸರ್ವ ಸುಲಭ ರೂಪದಲ್ಲಿ ಸ್ಪಷ್ಟವಾಯಿತು.

6. ಅಸ್ಥಿರತೆ, ಅನಿಶ್ಚಯತೆ ಮೂಲಕ ಭೌತಿಕವಾದದ ಅನುಸಾರ ವಸ್ತು ಕೇಂದ್ರಿತ ವಿಚಾರದಲ್ಲಿ ವಿಜ್ಞಾನವನ್ನು ಜ್ಞಾನವೆಂದು ನಂಬಿದ್ದು, ಇದರ ನಿಯಮಗಳನ್ನು ಮಾನವ ನಿರ್ಮಾಣ ಮಾಡಿರುವಂತೆ ಹೇಳಲಾಗಿದೆ.

ಇದರ ವೈಕಲ್ಪಿಕವಾಗಿ ಸಹ ಅಸ್ತಿತ್ವ ರೂಪಿ ಅಸ್ತಿತ್ವ ಮೂಲಕ ಮಾನವ ಕೇಂದ್ರಿತ ಚಿಂತನ ಜ್ಞಾನದ ಅನುಸಾರ ಅಸ್ತಿತ್ವ ಸ್ಥಿರ, ವಿಕಾಸ ಹಾಗು ಜಾಗೃತಿ ನಿಶ್ಚಿತ, ಸಂಪೂರ್ಣ ನಿಯಮಗಳು ಪ್ರಾಕೃತಿಕವಾಗಿರುವ ಪ್ರತಿಪಾದನೆ ಮಾಡಲಾಗಿದೆ.

7. ಅಸ್ತಿತ್ವ ಕೇವಲ ಭೌತಿಕ ರಾಸಾಯನಿಕವಲ್ಲ; ಅಸ್ತಿತ್ವದಲ್ಲಿ ಭೌತಿಕ ರಾಸಾಯನಿಕ ಮತ್ತು ಜೀವನ ವಸ್ತು ವ್ಯಾಪಕ ವಸ್ತುವಿನಲ್ಲಿ ಅವಿಭಾಜ್ಯವಾಗಿದೆ. ಇದೇ "ಮಧ್ಯಸ್ಥ ದರ್ಶನ ಸಹ ಅಸ್ತಿತ್ವ ವಾದ" ಶಾಸ್ತ್ರ ಸೂತ್ರ.

## ಸತ್ಯಾಪನೆ

8. ನಾನು ಎಲ್ಲಿಂದ ಶರೀರ ಯಾತ್ರೆ ಆರಂಭ ಮಾಡಿದೆನೋ ಅಲ್ಲಿ ನನ್ನ ಪೂರ್ವಜರು ವೇದಮೂರ್ತಿ ಎಂದು ಕರೆಯಲ್ಪಟ್ಟವರು. ಮನೆ ಮತ್ತು ಗ್ರಾಮದಲ್ಲಿ ವೇದ ಹಾಗು ವೇದ ವಿಚಾರ ಸಂಬಂಧಪಟ್ಟ ವೇದಾಂತ, ಉಪನಿಷತ್ತು ಮತ್ತು ದರ್ಶನವೇ ಭಾಷೆ ಧ್ವನಿ ರಾಗದ ರೂಪದಲ್ಲಿ ಕೇಳಿ ಬರುತ್ತಿತ್ತು. ಕುಟುಂಬ ಪರಂಪರೆಯಲ್ಲಿ ವೇದ ಸಂಬಂಧಿತ ಉಪಾಸನೆ - ಆರಾಧನೆ - ಅರ್ಚನೆ - ಸ್ತವನ ಕಾರ್ಯ ಸಂಪನ್ನವಾಗುತಿತ್ತು.

9. ನಮ್ಮ ಕುಟುಂಬ ಪರಂಪರೆಯಲ್ಲಿ ಶ್ರೇಷ್ಠ ಕೋಟಿಯ ವಿದ್ವಾಂಸರಲ್ಲಿ ಸೇವಾ ಭಾವಿ ಹಾಗು ಶ್ರಮಶೀಲ ವ್ಯವಹಾರಾಭ್ಯಾಸ ಮತ್ತು ಕರ್ಮಾಭ್ಯಾಸ ಸಹಜವಾಗಿತ್ತು, ಇದರಲ್ಲಿ ಶ್ರಮಶೀಲತೆ ಮತ್ತು ಸೇವಾ ಪ್ರವೃತ್ತಿಯೂ ನನಗೆ ಸ್ವೀಕಾರವಾಯಿತು. ವಿದ್ವತೆ ಪಕ್ಷದಲ್ಲಿ ಪ್ರಶ್ನೆ ಚಿನ್ಹೆಗಳು ಉಳಿದವು.

10. ಪ್ರಥಮ ಪ್ರಶ್ನೆ ಹೊರಹೊಮ್ಮಿತು -

ಬ್ರಹ್ಮ ಸತ್ಯದಿಂದ ಜಗತ್ತು ಹಾಗು ಜೀವಗಳ ಉತ್ಪತ್ತಿ ಮಿಥ್ಯಾ ಹೇಗೆ?

ದ್ವಿತೀಯ ಪ್ರಶ್ನೆ -

ಬ್ರಹ್ಮವೇ ಬಂಧನ ಹಾಗು ಮೋಕ್ಷಕ್ಕೆ ಕಾರಣ ಹೇಗೆ?

ತೃತೀಯ ಪ್ರಶ್ನೆ -
ಶಬ್ದ ಪ್ರಮಾಣವೇ ಅಥವಾ ಶಬ್ದದ ಧಾರಕ ವಾಹಕ ಪ್ರಮಾಣವೇ?
ಆಪ್ತ ವಾಕ್ಯ ಪ್ರಮಾಣವೇ ಅಥವಾ ವಾಕ್ಯ ಉದ್ಗರಿಸುವವನು ಪ್ರಮಾಣವೇ?

ಶಾಸ್ತ್ರ ಪ್ರಮಾಣವೇ ಅಥವಾ ಪ್ರಣೆತ ಪ್ರಮಾಣವೇ?

ಸಮಯೋಚಿತ ಪರಿಸ್ಥಿತಿಯಲ್ಲಿ ಮತ್ತೊಂದು ಪ್ರಶ್ನೆ ಉಕ್ಕಿತು

## ಚತುರ್ಥ ಪ್ರಶ್ನೆ -

ಭಾರತದ ಸ್ವತಂತ್ರದ ನಂತರ ಸಂವಿಧಾನ ಸಭೆಯ ನಿರ್ಮಾಣವಾಯಿತು. ಇದರಲ್ಲಿ ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರೀಯ ಚಾರಿತ್ರ್ಯ ಸೂತ್ರ ವರ್ಣನೆ ಇಲ್ಲವಾಗಿದ್ದು ಜನಪ್ರತಿನಿಧಿಯ ಪಾತ್ರವಿರುವ ಸ್ವೀಕೃತಿ ಸಂವಿಧಾನದಲ್ಲಿರುವುದು.
ವೋಟು ನೋಟಿನ ಘಟಬಂಧನದಿಂದ ಜನಾದೇಶ ಹಾಗು ಜನ ಪ್ರತಿನಿಧಿ ಹೇಗೆ ಸಾಧ್ಯ?

ಸಂವಿಧಾನದಲ್ಲಿ ಧರ್ಮ ನಿರಪೇಕ್ಷತೆ - ಒಂದು ವಾಕ್ಯ, ಹಾಗು ಅದೇ ವಾಕ್ಯದಲ್ಲಿ ಅನೇಕ ಜಾತಿ, ಸಂಪ್ರದಾಯ, ಸಮುದಾಯದ ಉಲ್ಲೇಖವಿರುವುದು.
ಸಂವಿಧಾನದಲ್ಲಿ ಸಮಾನತೆ - ಒಂದು ವಾಕ್ಯದಲ್ಲಿ, ಮತ್ತು ಅದೇ ವಾಕ್ಯದಲ್ಲಿ ಮೀಸಲಾತಿಯ ಉಲ್ಲೇಖ ಹಾಗು ಸಂವಿಧಾನದಲ್ಲಿ ಅದರ ಪ್ರಕ್ರಿಯೆಯಿರುವುದು.
ಜನತಂತ್ರ - ಶಾಸನೆಯಲ್ಲಿ ಜನಪ್ರತಿನಿಧಿಗಳ ಚುನಾವಣೆ ಪ್ರಕ್ರಿಯೆಯಲ್ಲಿ ವೋಟು ನೋಟಿನ ಘಟಬಂಧನವಿರುವುದು.

ಇದು ಎಂತಹ ಜನತಂತ್ರ? ಇದೇ ಸಮಾನತೆ ಹಾಗು ಧರ್ಮ ನಿರಪೇಕ್ಷತೆಯೇ?

11. ಈ ಪ್ರಶ್ನೆಗಳ ಜಂಜಾಟದಿಂದ ಮುಕ್ತಿ ಪಡೆಯುವುದಕ್ಕಾಗಿ ತತ್ಕಾಲೀನ ವಿದ್ವಾಂಸರ, ವೇದಮೂರ್ತಿಗಳ, ಮಾನ್ಯ ಋಷಿ ಮಹಾಋಷಿಗಳ ಸಲಹೆಯಿಂದ ನಾನು :-

(1) ಅಜ್ಞಾತವನ್ನು ಜ್ಞಾತ ಮಾಡುವುದಕ್ಕಾಗಿ ಸಮಾಧಿ ಒಂದೇ ದಾರಿ ಎಂದು ಸ್ವೀಕರಿಸಿದೆ.

(2) ಸಾಧನೆಗೆ ಅನುಕೂಲ ಸ್ಥಾನದ ರೂಪದಲ್ಲಿ ಅಮರ್ಕಂಟಕನ್ನು ಸಾಧನೆ ಸ್ಥಾನವೆಂದು ಸ್ವೀಕರಿಸಿದೆ.

(3) ಇಸವಿ 1950 ಇಂದ ಸಾಧನೆ ಕರ್ಮವನ್ನು ಆರಂಭಿಸಿದೆ. ಇಸವಿ 1960ನೆಯ ದಶಕದಲ್ಲಿ ಪ್ರೌಢತೆ ಪಡೆದೆ.

(4) ಇಸವಿ 1970 ನಲ್ಲಿ ಸಮಾಧಿ ಸಂಪನ್ನತೆ ಪಡೆದ ಸ್ಥಿತಿ ಸ್ವೀಕರಿಸಿದೆ. ಸಮಾಧಿ ಸ್ಥಿತಿಯಲ್ಲಿ ನನ್ನ ಆಸೆ, ವಿಚಾರ, ಇಚ್ಛೆಯು ಮೌನವಾಗಿದ್ದವು. ಈ ಸ್ಥಿತಿಯಲ್ಲಿ ಅಜ್ಞಾತವು ಜ್ಞಾತವಾಗುವ ಘಟನೆ ಶೂನ್ಯವಾಗಿತ್ತೆಂದು ಅರಿವಾಯಿತು. ಈ ಸ್ಥಿತಿಯ ಸಾಧನೆ, ದಿನವೂ ಹನ್ನೆರಡರಿಂದ ಹದಿನೆಂಟು ಗಂಟೆಕಾಲ (ಸಮಾಧಿ ಸ್ಥಿತಿಯಲ್ಲಿ) ಇರುತ್ತಿತ್ತು.

ಸಮಾಧಿ, ಧ್ಯಾನ, ಧಾರಣ, ಈ ಕ್ರಮದಲ್ಲಿ ನಾನು ಸಂಯಮವನ್ನು ಸ್ವಯಂ ಸ್ಫೂರ್ತ ಪ್ರಣಾಳಿಯಾಗಿ ಸ್ವೀಕರಿಸಿದೆ. ಎರಡು ವರ್ಷದ ನಂತರ, ಸಂಯಮವಾದ ನಂತರ ಸಮಾಧಿಯಾಗಿರುವ ಪ್ರಮಾಣ ಸ್ವೀಕರಿಸಿದೆ. ಸಮಾಧಿಯಿಂದ ಸಂಯಮ ಸಂಪನ್ನವಾಗುವ ಕ್ರಿಯೆಯಲ್ಲಿ ನಾನು 12 ಗಂಟೆಯಿಂದ 18 ಗಂಟೆ ಇರುತ್ತಿದ್ದೆ. ಫಲವಾಗಿ ಸಂಪೂರ್ಣ ಅಸ್ತಿತ್ವ ಸಹ-ಅಸ್ತಿತ್ವದ ರೂಪದಲ್ಲಿ ನನಗೆ ಅನುಭವವಾಯಿತು. ಇದರ ವಾಙ್ಗಮಯ "ಮಧ್ಯಸ್ಥ ದರ್ಶನ ಸಹ ಅಸ್ತಿತ್ವವಾದ" ಶಾಸ್ತ್ರದ ರೂಪದಲ್ಲಿ ಪ್ರಸ್ತುತವಾಯಿತು.

12. ಸಹ ಅಸ್ತಿತ್ವ:- ವ್ಯಾಪಕವಸ್ತುವಿನಲ್ಲಿ ಸಂಪೂರ್ಣ ಜಡ-ಚೈತನ್ಯ ಸಂಪೃಕ್ತ ಹಾಗು ನಿತ್ಯ ವರ್ತಮಾನವಾಗಿರುವುದು ಅರಿವಾಯಿತು.

ಸಹ ಅಸ್ತಿತ್ವದಲ್ಲೇ – ಪರಮಾಣುವಿನಲ್ಲಿ ವಿಕಾಸ ಕ್ರಮದ ರೂಪದಲ್ಲಿ ಹಸಿದ ಹಾಗು ಅಜೀರ್ಣ ಪರಮಾಣುಗಳಿವೆ. ಈ ಪರಮಾಣುವಿನಲ್ಲೇ ವಿಕಾಸದಿಂದ ತೃಪ್ತ ಸಂಘಟನೆಪೂರ್ಣ ಪರಮಾಣುಗಳ ರೂಪದಲ್ಲಿರುವುದು ಅರಿವಾಯಿತು.

ಸಹ ಅಸ್ತಿತ್ವದಲ್ಲೇ – ಸಂಘಟನೆ-ಪೂರ್ಣ ಪರಮಾಣು ಚೈತನ್ಯ ಘಟಕ, 'ಜೀವನ' ರೂಪದಲ್ಲಿರುವಂತೆ ಅರಿವಾಯಿತು.

ಸಹ ಅಸ್ತಿತ್ವದಲ್ಲೇ – ಹಸಿದ ಹಾಗು ಅಜೀರ್ಣ ಪರಮಾಣು, ಅಣು, ಪ್ರಾಣಕೋಶಗಳಿಂದಲೇ ಸಂಪೂರ್ಣ ರಚನೆ; ಪರಮಾಣು ಅಣುವಿನಿಂದ ರಚಿತ ಧರಣಿ ಹಾಗು ಅನೇಕ ಧರಣಿಗಳ ರಚನೆ, ಸ್ಪಷ್ಟವಾಗಿ ಅರಿವಾಯಿತು.

13. ಅಸ್ತಿತ್ವದಲ್ಲಿ ಭೌತಿಕ ರಚನೆ ರೂಪದಲ್ಲಿರುವ ಧರಣಿಯ ಮೇಲೆ ಯೌಗಿಕ ವಿಧಿಯಿಂದ, ರಾಸಾಯನ ತಂತ್ರ ಪ್ರಕ್ರಿಯೆ ಸಹಿತ, ಪ್ರಾಣ ಕೋಶಗಳಿಂದ ರಚಿತ ರಚನೆ ಸಂಪೂರ್ಣ ವನ-ವನಸ್ಪತಿಯ ರೂಪದಲ್ಲಿ ಸಮೃದ್ಧಿಯಾದನಂತರ, ಪ್ರಾಣಕೋಶಗಳಿಂದಲೇ ಜೀವಿ ಶರೀರ ರಚನೆಗಳು ರಚಿತವಾಗಿ ಹಾಗು ಮನುಷ್ಯನ ಶರೀರ ರಚಿತವಾಗಿ, ಹಾಗು ಇವುಗಳ ಪರಂಪರೆಯಿರುವುದರ ಅರಿವಾಯಿತು.

14. ಸಹ ಅಸ್ತಿತ್ವದಲ್ಲೇ - ಮಾನವನ ಪರಂಪರೆ, ಶರೀರ ಹಾಗು ಜೀವನದ ಸಂಯುಕ್ತ ರೂಪವೆಂದು ಅರಿವಾಯಿತು.
ಸಹ ಅಸ್ತಿತ್ವದಲ್ಲಿ, ಸಹ ಅಸ್ತಿತ್ವದಿಂದ, ಸಹ ಅಸ್ತಿತ್ವಕ್ಕಾಗಿ - ಸಹ ಅಸ್ತಿತ್ವ ನಿತ್ಯ ಪ್ರಭಾವಿ. ಇದೇ ನಿಯತಿ ಕ್ರಮವೆಂದು ಅರಿವಾಯಿತು.

15. ನಿಯತಿ ವಿಧಿ - ಸಹ ಅಸ್ತಿತ್ವ ವಿಧಿಯಿಂದಲೇ:-

(1) ಅಸ್ತಿತ್ವದಲ್ಲಿ ನಾಲ್ಕು ಅವಸ್ಥೆಗಳು
ಪದಾರ್ಥ ಅವಸ್ಥೆ
ಪ್ರಾಣ ಅವಸ್ಥೆ
ಜೀವ ಅವಸ್ಥೆ
ಜ್ಞಾನ ಅವಸ್ಥೆ

(2) ಅಸ್ತಿತ್ವದಲ್ಲಿ ನಾಲ್ಕು ಪದ
ಪ್ರಾಣ ಪದ
ಭ್ರಾಂತಿ ಪದ
ದೇವ ಪದ
ದಿವ್ಯ ಪದ

(3) ಮತ್ತು
ವಿಕಾಸ ಕ್ರಮ, ವಿಕಾಸ
ಜಾಗೃತಿ ಕ್ರಮ, ಜಾಗೃತಿ

ಜಾಗೃತಿ ಸಹಜ ಮಾನವ ಪರಂಪರೆಯೇ ಮಾನವತ್ವ ಸಹಿತ ವ್ಯವಸ್ಥೆ, ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸುವಿಕೆ ಹಾಗು ನಿತ್ಯ ವೈಭವವೆಂದು ಅರಿವಾಯಿತು.

ಇದನ್ನು ನಾನು ಸರ್ವ ಶುಭ ಸೂತ್ರ ಎಂದು ಸ್ವೀಕರಿಸಿದೆ ಹಾಗು ಸರ್ವ ಮಾನವನಲ್ಲಿ ಶುಭ ಅಪೇಕ್ಷೆ ಇರುವಂತೆ ಸ್ವೀಕರಿಸಿದೆ ಫಲವಾಗಿ ಚೇತನ ವಿಕಾಸ ಮೌಲ್ಯ ಶಿಕ್ಷಣ, ಸಂವಿಧಾನ, ನಡತೆ, ವ್ಯವಸ್ಥೆ ಸಹಜ ಸೂತ್ರ ವ್ಯಾಖ್ಯೆ, ಮಾನವನ ಸಮ್ಮುಖ ಪ್ರಸ್ತುತಿಸಿದ್ದೇನೆ.

ಧರಣಿ ಸ್ವರ್ಗವಾಗಲಿ, ಮನುಷ್ಯ ದೇವತನಾಗಲಿ
ಧರ್ಮ ಜಯವಾಗಲಿ, ನಿತ್ಯವೂ ಶುಭವಾಗಲಿ

\- ಎ. ನಾಗರಾಜ್

## ವಿಕಲ್ಪದ ಸ್ವರೂಪ ಕಾರ್ಯ - ವ್ಯವಹಾರದ ರೂಪದಲ್ಲಿ

16. ವಿಕಾಸ ಕ್ರಮದಲ್ಲಿ ಪದಾರ್ಥಾವಸ್ಥೆ ಹಾಗು ಪ್ರಾಣ ಅವಸ್ಥೆಯಿದೆ.
ಪದಾರ್ಥಾವಸ್ಥೆ:- ಧರಣಿಯು ಸಂಪೂರ್ಣ ಪ್ರಕಾರದ ಖನಿಜದಿಂದ ಸಂಪನ್ನವಾದ ಮೇಲೆ.
ಪ್ರಾಣಾವಸ್ಥೆ:- ಎಲ್ಲಾ ಪ್ರಕಾರದ ವನ, ದೊಡ್ಡ ಮತ್ತು ಚಿಕ್ಕ ಕಾಡು, ಅನೇಕ ಪ್ರಕಾರದ ವನಸ್ಪತಿಗಳಿಂದ ಸಂಪನ್ನವಾಗಿರುವುದು ಕಂಡುಬರುತ್ತದೆ. ವನ ಖನಿಜ ಸಂತುಲನದಲ್ಲಿದ್ದರೆ ಋತು ಸಂತುಲಿತವಾಗಿರುತ್ತದೆಯೆಂದು ಅರಿವಾಯಿತು.

ಇದರ ಜೊತೆಗೆ, ಮಾನವ ಜಾಗೃತಿ ಕ್ರಮದಲ್ಲಿ ಜೀವ ಚೇತನವಶದಿಂದ ಜೀವಿಸಿತ್ತಿರುವ ಸಮುದಾಯ ಪರಂಪರೆಯಲ್ಲಿ ಮಾನವನೇ ಪಶು ಮಾನವ ಹಾಗು ರಾಕ್ಷಸ ಮಾನವ ರೂಪದಲ್ಲಿ ಛಲ, ಕಪಟ, ಡಂಬ, ಪಾಖಂಡ, ದ್ರೋಹ, ವಿದ್ರೋಹ, ಶೋಷಣ, ಯುದ್ಧ, ಸಾಮ, ದಾಮ, ದಂಡ, ಭೇದ ಒಳಸಂಚು ವಶದಿಂದ ಸಂಪೂರ್ಣ ಪ್ರಕಾರದ ಅಪರಾಧ ಮಾಡುವುದನ್ನು ವೇದವೆಂದು (ನಿಯಮವೆಂದು) ಬಾಳುತ್ತಾ ಬಂದ್ದಿದ್ದು, ಧರಣಿ ಅಸ್ವಸ್ಥವಾಗಿದೆ. ಖನಿಜ ಇದ್ದಿಲು, ಖನಿಜ ತೈಲ ಹಾಗು ವಿಕಿರಣದ ಧಾತುಗಳನ್ನು ಧರಣಿಯಿಂದ ಅಪಹರಣ ಮಾಡುವುದು, ಧರಣಿಯ ಮೇಲೆ ಅಪರಾಧವೆಂದು ಸ್ಪಷ್ಟವಾಗಿದೆ. ಈ ಕ್ರಮದಲ್ಲಿ ಧರಣಿ ಅಸ್ವಸ್ಥವಾಗಿ ಇದು ಇದು ಮಾನವನಿಗೆ ಬಾಳಲು ಯೋಗ್ಯ ಸ್ಥಳ ಉಳಿಯುವುದೋ ಇಲ್ಲವೋ ಎಂಬವ ಪ್ರಶ್ನೆ ಚಿನ್ಹೆ ಬಂದಿತು. ಇದಕ್ಕೆ ವೈಕಲ್ಪಿಕವಾಗಿ ಪ್ರವಾಹ ಬಲದಿಂದ ಊರ್ಜಾ ಪ್ರಾಪ್ತಿಸುವ ಸಲಹೆಯಿದೆ. ಸೌರ ಊರ್ಜಾ ಸಂಬಂಧಿತ  ಉಪಕರಣಗಳನ್ನು ಕಡಿಮೆ ಬೆಲೆಗೆ ದೊರುಕುವಂತೆ, ಪವನ  ಯಂತ್ರವನ್ನು ಅಧಿಕವಾಗಿ ಉಪಯೋಗಿಸುವುದಕ್ಕೆ ಸಲಹೆಯಿದೆ. ಇದು ರಾಷ್ಟ್ರೀಯ ಯೋಜನೆಯ ಅಂತರ್ಗತ ಯೋಚಿಸುವುದಕ್ಕಾಗಿ ವಿಷಯ ಸೂಚಿಸಲಾಗಿದೆ.

17. ಜೀವ ಚೇತನದ ಪ್ರಮಾಣ ಧರಣಿಯ ಮೇಲೆ ಎಲ್ಲಾ ಸಂವಿಧಾನಗಳಲ್ಲಿಯು, ತಪ್ಪನ್ನು ತಪ್ಪಿನಿಂದಲೇ ತಡೆಯುವುದು, ಅಪರಾಧವನ್ನು ಅಪರಾದದಿಂದಲೇ ತಡೆಯುವುದು, ಯುದ್ಧವನ್ನು ಯುದ್ಧದಿಂದಲೇ ತಡೆಯುವ ಸ್ವರೂಪ ನೋಡಲು ಸಿಗುತ್ತದೆ. ಇದನ್ನೇ ನಿಯಮವೆಂದು ಸ್ವೀಕರಿಸಲಾಗಿದೆ.

- ಶಿಕ್ಷಣದಲ್ಲಿ ಲಾಭೋನ್ಮಾದ, ಕಾಮೋನ್ಮಾದ, ಭೋಗೋನ್ಮಾದ ಕಾರ್ಯ ವ್ಯವಹಾರಗಳಿಗೆ ಪ್ರೋತ್ಸಾಹನೆ ಕೊಡಲಾಗಿದೆ.
- ಎಲ್ಲಾ ಪ್ರಕಾರದ ಪ್ರಚಾರ ಮಾಧ್ಯಮಗಳು ಭಯ ಮತ್ತು ಪ್ರಲೋಭನೆಯ ಅರ್ಥದಲ್ಲಿ ಕಾರ್ಯೋದ್ಯುತರಾಗಿದ್ದಾರೆ. ಇದೇ ಮಾನವ ಜಾತಿಯ ಸಾಮರ್ಥ್ಯೆಯೆಂದು ನನಗೆ ಅರಿವಾಯಿತು.

18. ಈ ಉಕ್ತ ಎಲ್ಲಾ ಕಾರಣಗಳಿಂದ ನನ್ನಲ್ಲಿ ವಿಕಲ್ಪವನ್ನು ಪ್ರಸ್ತುತಗೊಳಿಸಲು ಸ್ವೀಕಾರವಾಯಿತು ಇವು –

ಸಹ ಅಸ್ತಿತ್ವವಾದ ವಿಧಿಯಿಂದ 'ಆವರ್ತನ್ ಶೀಲ್ ಅರ್ಥ ಶಾಸ್ತ್ರ್', 'ವ್ಯವಹಾರವಾದಿ ಸಮಾಜ್ ಶಾಸ್ತ್ರ್', 'ಮಾನವ್ ಸಂಚೇತನಾವಾದಿ ಮನೋವಿಜ್ಞಾನ' ಶಾಸ್ತ್ರ್ ಪ್ರಸ್ತುತವಾಗಿದೆ (ಸಧ್ಯಕ್ಕೆ ಹಿಂದಿ ಭಾಷೆಯಲ್ಲಿ ).

ಇದರಲ್ಲಿ ಜೀವನಮೌಲ್ಯ [ಸುಖ, ಶಾಂತಿ, ಸಂತೋಷ, ಆನಂದ], ಮಾನವ ಲಕ್ಷ್ಯ [ಸಮಾಧಾನ, ಸಮೃದ್ಧಿ, ಅಭಯ ಸಹ ಅಸ್ತಿತ್ವ] ಸಹಜ ಪರಂಪರೆಯಲ್ಲಿ ಹತ್ತು ಸೋಪಾನ ವ್ಯವಸ್ಥೆ ವಿಧಿಯಿಂದ ಸಫಲವಾಗುವ ಸಂಭವನೀಯತೆ ಪ್ರಮಾಣ, ವರ್ತಮಾನವಾಗಿರುವುದನ್ನು ಪ್ರಸ್ತಾಪಿಸಲಾಗಿದೆ.

19. ಮಾನವೀಯ ಮೌಲ್ಯ = ಧೀರತೆ, ವೀರತೆ, ಉದಾರತೆ, ದಯ, ಕೃಪೆ, ಕರುಣ ಹಾಗು ಮಾನವ ಲಕ್ಷ್ಯ - ಸಮಾಧಾನ, ಸಮೃದ್ಧಿ, ಅಭಯ (ವರ್ತಮಾನದಲ್ಲಿ ವಿಶ್ವಾಸ ನಾಲ್ಕು ಅವಸ್ಥೆಗಳ ಸಹಿತ) ವರ್ತಮಾನವಾಗುವುದು ಪ್ರಸ್ತಾಪಿಸಿದೆ.

ಮಾನವ ಸಂಸ್ಕೃತಿ, ಸಭ್ಯತೆ, ವಿಧಿ, ವ್ಯವಸ್ಥೆ ಸಹಜ ಪ್ರಮಾಣ ವರ್ತಮಾನವಾಗಿರುವುದು ಪ್ರಸ್ತಾಪಿಸಲಾಗಿದೆ, ಇದೇ ಸಹ ಅಸ್ತಿತ್ವ.
ಸ್ಥಾಪಿತ ಮೌಲ್ಯ - ಪರಸ್ಪರ ಸಂಬಂಧಗಳ ಗುರುತು, ಸಂಬಂಧಗಳಲ್ಲಿ ಮೌಲ್ಯಗಳ ನಿರ್ವಹಣೆಯೇ ಸಂಸ್ಕೃತಿಯ ನಿತ್ಯ ಉತ್ಸವ ಸಹಜ ವೈಭವ, ಅಖಂಡ ಸಮಾಜದ ಸೂತ್ರ ವ್ಯಾಖ್ಯೆ ಸಹಜ ಪ್ರಮಾಣ, ವರ್ತಮಾನವಾಗಿರುವುದು ಪ್ರಸ್ತಾಪಿಸಲಾಗಿದೆ.
ಶಿಷ್ಠ ಮೌಲ್ಯಗಳ ಜೊತೆಗೆ ವಸ್ತುಗಳ ಕೊಡು, ಕೊಳ್ಳು, ಅರ್ಪಣೆ, ಸಮರ್ಪಣೆ, ಕ್ರಿಯಾಕಲಾಪದ ರೂಪದಲ್ಲಿ ನಿತ್ಯ ಉತ್ಸವವಿರುವುದೇ ಮಾನವ ಚೇತನ ಸಹಜ ವೈಭವ. ಇದನ್ನೂ ಪ್ರಸ್ತಾಪಿಸಲಾಗಿದೆ.

ಮಾನವನ ಚೇತನವೇ ವ್ಯವಹಾರದಲ್ಲಿ ಮಾನವತ್ವ ಹಾಗು ನಡತೆಯಲ್ಲಿ ನಿಯಮ.

20. ಸಮಾಧಾನ, ಸಮೃದ್ಧಿ, ಅಭಯ, ಸಹ ಅಸ್ತಿತ್ವ ರೂಪದಲ್ಲಿ ಪ್ರಮಾಣವಾಗಿದ್ದು ವರ್ತಮಾನ ಉತ್ಸವವೇ ಮಾನವತ್ವ.

ಮಾನವ ಚೇತನ ಸಹಜ ಜ್ಞಾನ, ವಿವೇಕ, ವಿಜ್ಞಾನದ ಅನುಸಾರ, ಯೋಚನೆ, ವಿಚಾರ, ಯೋಜನೆ, ಕಾರ್ಯ ಯೋಜನೆ ಹಾಗು ವ್ಯವಹಾರ, ಇದರ ಫಲಪರಿಣಾಮವು ವಿಜ್ಞಾನ, ವಿವೇಕ ಜ್ಞಾನದ ಅನುಸಾರವಾಗುವುದೇ ನಿತ್ಯ 'ಸಮಾಧಾನ' ಉತ್ಸವ. ಇದೇ ಮಾನವ ಚೇತನ ಸಹಜ ವೈಭವ. ಮಾನವ ಚೇತನ ಸಹಜ ವೈಭವವೇ ಮಾನವತ್ವ.
ಜ್ಞಾನ - ಸಹ ಅಸ್ತಿತ್ವ ರೂಪದಲ್ಲಿ.

- ಅಸ್ತಿತ್ವ ದರ್ಶನ ಜ್ಞಾನ
- ಜೀವನ ಜ್ಞಾನ
- ಮಾನವೀಯತೆಪೂರ್ಣ ನಡತೆ ಜ್ಞಾನ

ವಿವೇಕ -

- ಜೀವನದ ಅಮರತ್ವ
- ಶರೀರದ ನಶ್ವರತ್ವ
- ವ್ಯವಹಾರದ ನಿಯಮ

ಮಾನವೀಯತೆ ಪೂರ್ಣ ನಡತೆ:-

- ಸ್ವಧನ, ಸ್ವನಾರಿ, ಸ್ವಪುರುಷ, ದಯಾಪೂರ್ಣ ಕಾರ್ಯವ್ಯವಹಾರ.
- ಸಂಬಂಧ, ಮೌಲ್ಯ, ಮೌಲೀಕರಣೆ, ಉಭಯ ತೃಪ್ತಿ.
- ತನ ಮನ ಧನ ರೂಪದ ಅರ್ಥದ ಸದುಪಯೋಗ ಹಾಗು ರಕ್ಷಣೆ

ವಿಜ್ಞಾನ - ಕಾಲ, ಕ್ರಿಯೆ, ನಿರ್ಣಯವಾದಿ ಜ್ಞಾನ
ಕ್ರಿಯೆಯ ಅವಧಿ - ಕಾಲ

ಕ್ರಿಯೆ ನಿತ್ಯ ವರ್ತಮಾನ

ಸಹ ಅಸ್ತಿತ್ವದಲ್ಲಿ ಸಂಪೂರ್ಣ ಪ್ರಕೃತಿ ಕ್ರಿಯೆಯ ಸ್ವರೂಪದಲ್ಲಿ ವರ್ತಮಾನವಾಗಿದೆ.

ಕ್ರಿಯೆ - ಶ್ರಮ, ಗತಿ, ಪರಿಣಾಮ
ಪರಿಣಾಮದ ಅಮರತ್ವ - ಸಂಘಟನಾಪೂರ್ಣ ಪರಮಾಣು ಚೈತನ್ಯ ಘಟಕ ಜೀವನ
ಶ್ರಮದ ವಿಶ್ರಾಮ - ಮಾನವ ಚೇತನ ಸಂಪನ್ನ ಪರಂಪರೆ, ಅಖಂಡ ಸಮಾಜ ಸೂತ್ರ ವ್ಯಾಖ್ಯೆ ಮತ್ತು ಸಾರ್ವತ್ರಿಕ ವ್ಯವಸ್ಥೆ ಸಹಜ ಸೂತ್ರ ವ್ಯಾಖ್ಯೆ = 'ಅಭ್ಯುದಯ'

ಈಷಣ ಪ್ರವೃತ್ತಿ - ಪುತ್ರೇಷಣ, ವಿತ್ತೇಷಣ, ಲೋಕೇಷಣ
ಗತಿಯ ಗಂತವ್ಯ - ದೇವ ಚೇತನ, ದಿವ್ಯ ಚೇತನ ಸಹಜ ವೈಭವ ರೂಪದಲ್ಲಿ, ಉಪಕಾರ ಪ್ರವೃತ್ತಿ ಸರ್ವಶುಭ ರೂಪದಲ್ಲಿ.

ಇದೆಲ್ಲಾ ಅಧ್ಯಯನಗಮ್ಯ ಹಾಗು ಬಾಳುವುದು ಮಾನವನಲ್ಲಿ, ಮಾನವನಿಂದ, ಮಾನವನಿಗೆ.

## ಪ್ರಯೋಜನ ಸಂಭವನೀಯತೆ

21. ಧರಣಿಯ ಮೇಲೆ ೭೦೦ ಕೋಟಿ ಮಾನವ ಅಪರಾಧ ಕಾರ್ಯ ಪ್ರವೃತ್ತಿಗೆ ಪ್ರತಿಯೊಬ್ಬ ನರ ನಾರಿ ಅರಿವುಳ್ಳವವನಾಗುವುದು.
ಅರಿವಿನಿಂದ ಸಮಾಧಾನ - ಸಹಜ ಪ್ರಮಾಣ ವರ್ತಮಾನವಾಗುವುದು.

ಸಮಾಧಾನ ಸಂಪನ್ನವಾದ ಪ್ರತ್ಯೇಕ ಕುಟುಂಬದಲ್ಲಿ ಶ್ರಮ ನಿಯೋಜನೆಯಿಂದ ಸಮೃದ್ಧಿ ಪ್ರಮಾಣವಾಗಿದ್ದು, ಸಮಾಧಾನ ಸಮೃದ್ಧಿ ಸಂಪನ್ನವಾದ ಪ್ರತ್ಯೇಕ ಕುಟುಂಬದಲ್ಲಿ ಉಪಕಾರ ಪ್ರವೃತ್ತಿಗಳ ಪ್ರಮಾಣಿತವಾಗುವುದು ಸಮುಚಿತವಾಗಿದೆ.

22. ಚೇತನ ವಿಕಾಸ ಮೌಲ್ಯ ಶಿಕ್ಷಣ ಸಂಸ್ಕಾರದ ಸಹಿತ ತಾಂತ್ರಿಕ ಶಿಕ್ಷಣ ವಿಧಿಯಿಂದಲೇ ಪ್ರತ್ಯೇಕ ಕುಟುಂಬ ಅಖಂಡ ಸಮಾಜ ಸೂತ್ರ ವ್ಯಾಖ್ಯೆ ಹಾಗು ಸಾರ್ವತ್ರಿಕ ವ್ಯವಸ್ಥೆ ಸೂತ್ರ ವ್ಯಾಖ್ಯೆ ರೂಪದಲ್ಲಿ ಬಾಳುವುದೇ ಸಮಾಧಾನ, ಸಮೃದ್ಧಿ, ಅಭಯ, ಸಹ ಅಸ್ತಿತ್ವ ಸಹಜ ಪರಂಪರೆ ವೈಭವವಾಗುವುದೇ, ಅಪರಾಧ ಮುಕ್ತಿ ಪರಂಪರೆಯಾಗುವುದು ಸಮುಚಿತವಾಗಿದೆ.

ಪ್ರತ್ಯೇಕ ನರ ನಾರಿ ಸ್ವಯಂನಲ್ಲಿ ನಿಯಂತ್ರಣ ಸಂತುಲನ ನ್ಯಾಯ ಧರ್ಮ ಸತ್ಯ ಸಹಜ ಪ್ರಮಾಣ ರೂಪದಲ್ಲಿ ವರ್ತಮಾನ ವೈಭವವಾಗುವುದು ಅಗತ್ಯವಾಗಿದೆ.

23. ಚೇತನ ವಿಕಾಸ ಮೌಲ್ಯ ಶಿಕ್ಷಣ ರೂಪದಲ್ಲಿ ಅಧ್ಯಯನಕ್ಕಾಗಿ ಅಸ್ತಿತ್ವ ಮೂಲಕ ಮಾನವ ಕೇಂದ್ರಿತ ಚಿಂತನವೇ, ಮಧ್ಯಸ್ಥ ದರ್ಶನ ನಾಲ್ಕು ಭಾಗಗಳಲ್ಲಿ - (ಸಧ್ಯಕ್ಕೆ ಹಿಂದಿ ಭಾಷೆಯಲ್ಲಿ)

1. ಮಾನವ್ ವ್ಯವಹಾರ್ ದರ್ಶನ್
2. ಮಾನವ್ ಕರ್ಮ್ ದರ್ಶನ್
3. ಮಾನವ್ ಅಭ್ಯಾಸ್ ಧರ್ಶನ್
4. ಮಾನವ್ ಅನುಭವ್ ದರ್ಶನ್

24. ದರ್ಶನಗಳ ಮೇಲೆ ಆಧಾರಿತ ವಿಚಾರ-ವಾದ ಮೂರು ಭಾಗಗಳಲ್ಲಿ -

1. ಸಮಾಧಾನಾತ್ಮಕ್ ಭೌತಿಕವಾದ್
2. ವ್ಯವಹಾರಾತ್ಮಕ ಜನವಾದ್
3. ಅನುಭವಾತ್ಮಕ್ ಅಧ್ಯಾತ್ಮವಾದ್

25. ದರ್ಶನ ವಾದದ ಆಧಾರದ ಮೇಲೆ ಶಾಸ್ತ್ರ ಮೂರು ಭಾಗಗಳಲ್ಲಿ -

1. ಆವರ್ತನ್ ಶೀಲ್ ಅರ್ಥಶಾಸ್ತ್ರ್
2. ವ್ಯವಹಾರವಾದಿ ಸಮಾಜ್ ಶಾತ್ರ್
3. ಮಾನವ್ ಸಂಚೇತನಾವಾದಿ ಮನೋವಿಜ್ಞಾನ್ ಶಾಸ್ತ್ರ್

26. ಚಿಂತನ - ದರ್ಶನ - ವಾದ - ಶಾಸ್ತ್ರದ ಆಧಾರದ ಮೇಲೆ ಜೀವನ ವಿದ್ಯೆ ಪ್ರಬೋಧನೆ ವಿಧಿ ಸ್ಪಷ್ಟವಾಗಿದೆ. ಮಾನವೀಯ ಆಚಾರ ಸಂಹಿತ ರೂಪದಲ್ಲಿ 'ಸಂವಿಧಾನ ವ್ಯವಸ್ಥೆ' (ಪ್ರಕಾಶನ ಪ್ರಕ್ರಿಯೆಯಲ್ಲಿ) ಅಧ್ಯಯನಕ್ಕೆ ಅವಕಾಶವಿದೆ, ಪ್ರಸ್ತುತಪಡಿಸಲಾಗಿದೆ.

27. ಇದರ ಜೊತೆಗೆ 'ಪರಿಭಾಷ ಸಂಹಿತ' ಪ್ರಸ್ತುತಪಡಿಸಲಾಗಿದೆ.

# ವ್ಯಕ್ತವ್ಯ

ವಿಕಲ್ಪವೆನ್ನುವ ಹೆಸರುಳ್ಳ ೨೭ ವಿಷಯದ ರೂಪದಲ್ಲಿರುವ ಸೂಚನೆ ಪ್ರಸ್ತುತ ಪಡಿಸಲಾಗಿದೆ. ಇದರ ಮೂಲ ಅಭಿಪ್ರಾಯದಲ್ಲಿ ಸ್ವಂತ-ಪರಕೀಯ ಎಂಬುವ ಪ್ರತಿಬಂಧಕದಿಂದ ಮುಕ್ತಿ, ದ್ವೇಷ ಮುಕ್ತಿ, ಅಪರಾಧ ಮುಕ್ತಿ ವಿಧಿಯಿಂದಲೇ ಮಾನವ ಚೇತನದಿಂದ ಸಮಾಧಾನ, ಸಮೃದ್ಧಿ ಸಹಿತ ಅಖಂಡ ಸಮಾಜ ಸಾರ್ವತ್ರಿಕ ವ್ಯವಸ್ಥೆ ಸೂತ್ರ ವ್ಯಾಖ್ಯೆ ರೂಪದಲ್ಲಿ  ಬಾಳುವುದು ಮಾನವ ಪರಂಪರೆಗೆ ಅಗತ್ಯವಾಗಿದೆ (ಮಾನವ ಈ ಧರಣಿಯ ಮೇಲೆ ಪರಂಪರೆಯ ರೂಪದಲ್ಲಿರಬೇಕೆಂದರೆ). ಆಧರಿಂದ ಸಕಾರಾತ್ಮಕ ಭಾಗದಲ್ಲಿ ನಿರ್ಣಯ ತೆಗೆದುಕೊಳ್ಳುವ ಸ್ಥಿತಿಯಲ್ಲಿ, ಈ ಎಲ್ಲಾ ಸೂಚನೆಗಳ ಆಧಾರದಮೇಲೆ ಸಕಾರಾತ್ಮಕ ಉದ್ದೇಶದಿಂದ ಎಷ್ಟೇ ಪ್ರಶ್ನೆಗಳು ಇರಬಹುದೋ ಅವೆಲ್ಲಕ್ಕೂ ಉತ್ತರ ನನ್ನ ಹತ್ತಿರ ಸುರಕ್ಷಿತವಾಗಿದೆ. ಅವಶ್ಯಕತೆ ಅನುಸಾರ ಇದನ್ನು ಪಡೆದುಕೊಳ್ಳಬಹುದು.

ಎ. ನಾಗರಾಜ್
ಪ್ರಾಣೇತ
ಮಧ್ಯಸ್ಥ ದರ್ಶನ ಸಹ ಅಸ್ತಿತ್ವವಾದ
ದಿವ್ಯ ಪಥ ಸಂಸ್ಥಾನ
ಭಜನಾಶ್ರಮ, ಅಮರ್ಕಂಟಕ್
ಜಿಲ್ಲೆ - ಶಹಡೋಲ್ (ಮ. ಪ್ರ.)

# ವಿಕಲ್ಪದಲ್ಲಿ ಉಪಯೋಗಿಸಿದ ಶಬ್ಧಗಳ ಪರಿಭಾಷೆ.

**ಅ – (ಅ) – (ಆ)**

1. ಅಸ್ತಿತ್ವ - ಇರುವಿಕೆ, ನಿರಂತರ ಇರುವುದು, ಸಹಜ ರೂಪದಲ್ಲಿರುವುದು
2. ಅವಿಭಾಜ್ಯ - ವ್ಯಾಪಕ ವಸ್ತುವಿನಲ್ಲಿ ಒಂದೊಂದು ವಸ್ತುವಿನ ನಿರಂತರ ಕ್ರಿಯಾಶೀಲತೆ, ನಿರಂತರ ವರ್ತಮಾನವಾಗಿರುವುದು.
3. ಆಶ್ರಮ - ಶ್ರಮ ಮೂಲಕ ಮಾನವ ಚೇತನದ ಅನುಸಾರ ಪ್ರಮಾಣ ಪ್ರಸ್ತುತ ಪಡಿಸುವುದು. ಪ್ರಯತ್ನದಿಂದ ಮಾನವ ಚೇತನದ ಅನುಸಾರ ಪ್ರಮಾಣ ಪ್ರಸ್ತುತ ಪಡಿಸುವುದು.
4. ಅನಂತ - ಯಾವುದರ ಗಣಿತೀಯವಿಧಿಯಿಂದ ಗಣನ ಅರಿವಾಗಲಿಲ್ಲವೋ- ಅದಿರುವ ಸಂಭವನೀಯತೆಯಿದ್ದು, ಕಲ್ಪನೆಯಲ್ಲಿದ್ದು, ಅರಿವಾಗಿಲ್ಲವೋ - ಜ್ಞಾತವಾಗುವ ಸಂಭವನೀಯತೆ ಇದೆಯೋ.
5. ಅಧ್ಯಯನ - ಅನುಭವ ಸಹಜ ಪ್ರಕಾಶದಲ್ಲಿ ಸ್ಮರಣೆಯಿಂದ ಮಾಡುವ ಕ್ರಿಯಾಕಲಾಪ ಹಾಗು ಅರಿತುಕೊಳ್ಳುವ ಪ್ರಯಾಸ.
6. ಅಖಂಡ ಸಮಾಜ - ಮಾನವ ಜಾತಿ, ಧರ್ಮ, ರಾಜ್ಯ ವ್ಯವಸ್ಥೆಯಲ್ಲಿ ಏಕರೂಪತೆ ಸಂಸ್ಕೃತಿ, ಸಭ್ಯತೆ, ವಿಧಿ, ವ್ಯವಸ್ಥೆಯಲ್ಲಿ ಏಕರೂಪತೆ ಸಹಜ ವರ್ತಮಾನ ಪರಂಪರೆ.
7. ಅಧ್ಯಯನಗಮ್ಯ - ಅಧ್ಯಯನದಿಂದ ಅಸ್ತಿತ್ವ ಸಹಜ ವಸ್ತು ಅರಿವಾಗುವುದು

8. ಅಜೀರ್ಣ ಪರಮಾಣು - ಪರಮಾಣು ತೃಪ್ತಿ ಪಡೆಯಲು ಎಷ್ಟು ಅಂಶಗಳ ಅವಶ್ಯಕತೆ ಸುನಿಶ್ಚಿತವಾಗಿರುತ್ತದೆಯೋ ಅದಕ್ಕಿಂತ ಅಧಿಕ ಅಂಶಗಳ ಸಂಘಟಿತವಾಗುವುದು, ವಿಕಿರಣೀಯತೆ ಪ್ರಭಾವವನ್ನು ಪ್ರಸಾರ ಮಾಡುತ್ತಲ್ಲಿರುವುದು ಮತ್ತು ತನ್ನಿಂದ ಸ್ವಲ್ಪ ಅಂಶಗಳನ್ನು ವಿಸರ್ಜಿಸಲು ಪ್ರಯತ್ನಶೀಲವಾಗಿರುವ ಪ್ರಮಾಣ.

9. ಅಣು - ಜಡ ಪರಮಾಣುಗಳ ಸಂಘಟಿತ ರೂಪ, ಒಂದರಿಂದ ಅಧಿಕ ಪರಮಾಣು ಅಂಶಗಳ ಸಂಯುಕ್ತ ಕ್ರಿಯಾ-ಕಲಾಪ.

10. ಅಪರಾಧ - ಪರ-ಧನ, ಪರ-ನಾರಿ, ಪರ-ಪುರುಷ, ಪರ-ಪೀಡನೆ ಕಾರ್ಯ ವರ್ತನೆ ಹಾಗು ಸಂಗ್ರಹ ಸೌಕರ್ಯಗಳನ್ನು ಜೀವನೋಪಾಯವೆಂದು ನಂಬಿರುವ ಪಶುಮಾನವ, ರಾಕ್ಷಸಮಾನವ.

11. ಆವರ್ತನಶೀಲತೆ - ಜಾಗೃತ ಮಾನವ ಪರಂಪರೆಯಲ್ಲಿಯೇ ಪ್ರತ್ಯೇಕ ಉತ್ಪಾದನೆ ಕಾರ್ಯದಲ್ಲಿ ಮೂಲ ವಸ್ತುವನ್ನು ಕಾಪಾಡಿದ್ದು ಉತ್ಪಾದನೆಯಿಂದ ಸಮೃದ್ಧಿಯಾಗುವುದು.

12. ಅಭಯ - ವರ್ತಮಾನದಲ್ಲಿ ವಿಶ್ವಾಸ ಸಂಪನ್ನ ಮಾನವನೇ - ಅಖಂಡ ಸಮಾಜ ಸಾರ್ವತ್ರಿಕ ವ್ಯವಸ್ಥೆ ಸೂತ್ರ ವ್ಯಾಖ್ಯೆ ಪ್ರಮಾಣ.

13. ಅರ್ಪಣೆ - ಏನಾದರು ಕೊಟ್ಟು ತೆಗೆದುಕೊಳ್ಳುವ ವಿಧಿಯಿಂದ ಅರ್ಪಣೆ. ತೆಗೆದುಕೊಳ್ಳುವ ಅಪೇಕ್ಷೆ ಸಹಿತ ಶ್ರಮ, ಸೇವೆ, ನಿಯೋಜನೆ ಕ್ರಿಯೆ.

14. ಅಮರತ್ವ - ಪರಿಣಾಮದ ಅಮರತ್ವ (ಸಂಘಟನೆಪೂರ್ಣತೆ) = ಜೀವನ

15. ಅಭ್ಯುದಯ - ಸರ್ವತೋಮುಖಿ ಸಮಾಧಾನ ಪ್ರಮಾಣ ವರ್ತಮಾನ

16. ಆಸೆ - ಮಾನವ ಪರಂಪರೆಯಲ್ಲಿಯೇ ಸುಖವಾಗಿ ಬಾಳುವ ಆಸೆ ಸೇರಿದೆ.

**ಇ – ಈ**

17. ಇಚ್ಛೆ - ದರ್ಶನ ಮತ್ತು ಅದರ ಪ್ರಕಟಣೆ ಸಂಯುಕ್ತ ಚಿಂತನೆ ಕ್ರಿಯೆಯ ಚಿತ್ರಣ

18. (ಇಮಾಂದಾರಿ) ಪ್ರಾಮಾಣಿಕತೆ - **ಅರಿವಿನ ಪ್ರಮಾಣ** - ಸರ್ವ ಶುಭ ಸಮಾಧಾನಕಾರಿ ಅರಿವನ್ನು ಪ್ರಮಾಣಿಸುವುದಕ್ಕಾಗಿ ನಿಶ್ಚಿತ ಯೋಜನೆ ತಯಾರಿಸುವುದು.

**ಉ ಊ ಎ ಏ**

19. ಉಭಯ ತೃಪ್ತಿ - ಕನಿಷ್ಠ ಎರಡು ಇಲ್ಲದಿದ್ದರೆ ಎರಡಕ್ಕಿಂತ ಅಧಿಕ ಸಂಬಂಧಗಳಲ್ಲಿ ಮೌಲ್ಯಗಳ ನಿರ್ವಹಣೆ, ಮೌಲ್ಯಾಂಕನ, ಉಭಯ ತೃಪ್ತಿ.

20. ಉಪಕಾರ - ಅರಿವುಳ್ಳವವನಾಗಿ ಸಮೃದ್ಧಿ ಸಂಪನ್ನವಾಗಿ, ಅರಿವು ಹಾಗು ಸಮೃದ್ಧಿಯಿಂದ ಬಾಳಲು ಬಿಡು ಹಾಗು ಬಾಳು.

21. ಉಪಾಸನೆ - ಉಪಾಯದಿಂದ ವಾಂಛಿತ ವಸ್ತುವಿನ ಅಧ್ಯಯನ ಸ್ವೀಕೃತಿ ಪ್ರಾಪ್ತಿ ಪ್ರಮಾಣ.

22. ಈಷಣ - ಈಷಣಗಳ (ಪುತ್ರೇಷಣ, ವಿತ್ತೇಷಣ, ಲೋಕೇಷನ) ಪ್ರಕಟಣೆ

## ಕ

23. ಕರ್ಮ - ಉತ್ಪಾದನೆ ಕರ್ಮ (ಆಹಾರ - ಆವಾಸ - ಅಲಂಕಾರ) = ಸಾಮಾನ್ಯಾಕಾಂಕ್ಷೆ (ದೂರದರ್ಶನ - ದೂರಶ್ರವಣ - ದೂರಗಮನ) = ಮಹತ್ವಾಕಾಂಕ್ಷೆ ಸಂಬಂಧ ಪಟ್ಟ ಯಂತ್ರ ಉಪಕರಣದ ನಿರ್ಮಾಣ.

24. ಕಾರ್ಯ ಯೋಜನೆ - ಯೋಜನೆಯ ಕ್ರಿಯಾನ್ವಯನ ಮಾಡುವುದು

ಕಾರ್ಯ ವ್ಯವಹಾರ - ಮಾನವನ ಜೊತೆಗೆ ವ್ಯವಹಾರ, ಜಡ ಪ್ರಕೃತಿಯ ಜೊತೆಗೆ ಉತ್ಪಾದನೆ ನಿಯಂತ್ರಣಕ್ಕಾಗಿ ಕಾರ್ಯ.

25. ಕರ್ಮಾಭ್ಯಾಸ - ಪ್ರಾಕೃತಿಕ ಐಶ್ವರ್ಯದ ಮೇಲೆ ಉಪಯುಕ್ತತೆ ಮೌಲ್ಯ, ಕಲಾಮೌಲ್ಯವನ್ನು, ಸ್ಥಾಪನೆ ಮಾಡುವ ಕ್ರಿಯಾಕಲಾಪದಲ್ಲಿ ಪಾರಂಗತತೆ ಪಡೆಯುವುದು.

26. ಕಾಮೋನ್ಮಾದ - ಯೌವ್ವನ ವಿಚಾರದಲ್ಲಿ ನಿರತ ಮಾನವ.

## ಖ

27. ಖನಿಜ - ಗಟ್ಟಿ ಭೂಮಿಯಿಂದ ವಾಂಛಿತ ವಸ್ತುವನ್ನು ಅಗೆದು ತೆಗೆಯುವ ವಸ್ತು.

## ಗ

28. ಗತಿ - ಸ್ಥಾನಾಂತರಣೆ ಪರಿವರ್ತನೆ. ತ್ವ ಸಹಿತ ವ್ಯವಸ್ಥೆ ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸುವಿಕೆ.

**ಚ**

29. ಚೇತನ ವಿಕಾಸ - ಜೀವ ಚೇತನಗಿಂತ ಮಾನವ ಚೇತನ ಶ್ರೇಷ್ಠ, ಮಾನವ ಚೇತನಗಿಂತ ದೇವ ಚೇತನ ಶ್ರೇಷ್ಠತರ್, ದೇವ ಚೇತನಗಿಂತ ದಿವ್ಯ ಚೇತನ ಶ್ರೇಷ್ಠತಂ.

30. ಚೈತನ್ಯ - ಸಂಘಟನೆಪೂರ್ಣ ಪರಮಾಣು, ಚೈತನ್ಯ ಘಟಕ, ಜೀವನ.

31. ಚಿಂತನ - ಇಚ್ಛಾಶಕ್ತಿಯಲ್ಲಿ, ಇಚ್ಛಾಶಕ್ತಿಯಿಂದ, ಇಚ್ಛಾಶಕ್ತಿಗಾಗಿ, ಪರಿಮಾರ್ಜನೆ ಅನುಭವ ಪ್ರಮಾಣ ಮೂಲಕ ಯೋಚನೆ ವಿಧಿ ಸಹಜ ಪ್ರಕಟಣೆ ಕ್ರಿಯೆ.

**d**

32. ಜೀವನ ಜ್ಞಾನ - ಸಂಘಟನೆ ಪೂರ್ಣತೆ, ಕ್ರಿಯಾಪೂರ್ಣತೆ, ನಡತೆ-ಪೂರ್ಣತೆಯನ್ನು ಅರಿತುಕೋಳ್ಳುವುದು, ಅರಿವುಂಟುಮಾಡುವುದು.

33. ಜೀವನ ವಸ್ತು - ಬಾಳುವ ಆಸೆ, ವಿಚಾರ, ಇಚ್ಛೆ, ಋತಂಭರ, ಪ್ರಮಾಣ ಪ್ರಸ್ತುತಗೊಳಿಸುವುದು.

34. ಜಡ - ಪದಾರ್ಥ ಹಾಗು ಪ್ರಾಣಾವಸ್ಥೆ ಸಹಜ ಕ್ರಿಯಾಕಲಾಪ, ಯಾವುದು ಎಷ್ಟು ಉದ್ದ - ಅಗಲ - ಎತ್ತರವಿರುತ್ತದೆಯೋ ಅದು ಅಷ್ಟೇ ವಿಸ್ತಾರದಲ್ಲಿ ಕಿರ್ಯಾಶೀಲವಾಗಿರುವುದು.

35. ಜಗತ್ತು - ಭೌತಿಕ ರಾಸಾಯನಿಕ ಪ್ರಪಂಚ

36. ಜೀವಾವಸ್ಥೆ - ಬಾಳುವ ಆಸೆ ಸಹಿತ ಅನೇಕ ವಂಶದ ರೂಪದಲ್ಲಿ

ವರ್ತಮಾನ.

37. ಜಾಗೃತಿ ಸಹಜ ಮಾನವ ಪರಂಪರೆ - ಅರಿವು ಸಹಜ ಸರ್ವತೋಮುಖಿ ಸಮಾಧಾನ ರೂಪದಲ್ಲಿ ಪ್ರಮಾಣ ತೋರುವ ಪರಂಪರೆ. ಶಿಕ್ಷಣ ಸಂಸ್ಕಾರ, ನ್ಯಾಯ ರಕ್ಷಣೆ, ವಿಧಿಯಿಂದ ಪ್ರಮಾಣ.

38. ಜೀವನ ಮೌಲ್ಯ - ಸುಖ, ಶಾಂತಿ, ಸಂತೋಷ, ಆನಂದ.

39. ಜವಾಬ್ದಾರಿ - ವ್ಯವಹಾರ ಕಾರ್ಯ ವ್ಯವಹಾರ ಯೋಜನೆಯಲ್ಲಿ ಅನುಭವ ಸಹಜ ವೈಭವವನ್ನು ಪರಿಣಿತಗೊಳಿಸುವುದು.

## ದ

40. ದೇವ ಪದ ಚಕ್ರ - ಮಾನವ ಚೇತನ ಸಹಜ ಪ್ರವೃತ್ತಿಯಲ್ಲಿ ಗುಣಾತ್ಮಕ ವಿಕಾಸ ರೂಪದಲ್ಲಿ ದೇವ ಚೇತನದ ದಿಕ್ಕಿನಲ್ಲಿ, ಹಾಗು ದೇವ ಚೇತನ ಹ್ರಾಸವಾಗಿ ಮಾನವ ಚೇತನಕ್ಕೆ ಪರಿವರ್ತನೆಯಾಗುವುದು.

41. ದಿವ್ಯ ಪದ - ದಿವ್ಯ ಚೇತನ ಉಪಕಾರ ಪ್ರಧಾನ ವಿಧಿ ನಿತ್ಯ ವರ್ತಮಾನ, ನಡತೆ ಪೂರ್ಣತೆ, ಉಪಕಾರ ಪ್ರವೃತ್ತಿ ಸಹಜ ಪ್ರಮಾಣ.

42. ದರ್ಶನ - ಸ್ಥಿತಿ ಗತಿ (ರೂಪ ಗುಣ ಸ್ವಭಾವ ಧರ್ಮ ಸಮೇತ ಸ್ವೀಕೃತಿ) ಮೌಲ್ಯಾಂಕನ ವರ್ತಮಾನ ಪ್ರಮಾಣ.

43. ದೃಶ್ಯ - ವ್ಯಾಪಕವಸ್ತುವಿನಲ್ಲಿ, ವ್ಯಾಪಕವಸ್ತುವಿನಿಂದ, ವ್ಯಾಪಕವಸ್ತುಗಾಗಿ ಅವಿಭಾಜ್ಯ ರೂಪದಲ್ಲಿರುವುದು.

44. ದೃಷ್ಟಾ - ದೃಶ್ಯ ಸ್ಥಿತಿ, ವಸ್ತು ಸ್ಥಿತಿ ಸತ್ಯ, ವಸ್ತುಗತ ಸತ್ಯವನ್ನು ಅರಿತುಕೊಳ್ಳುವುದು, ಅರಿವುಂಟುಮಾಡುವುದು.

45. ದರ್ಶನ ಜ್ಞಾನ - ಸ್ಥಿತಿ ಸತ್ಯ, ವಸ್ತು ಸ್ಥಿತಿ ಸತ್ಯ, ವಸ್ತುಗತ ಸತ್ಯ ಸಹಜ ಅರಿವು ಸ್ವೀಕೃತಿ ಪ್ರಮಾಣ.

46. ದೀಕ್ಷೆ - ಅರಿತುಕೊಳ್ಳಲು ಹಾಗು ಅರಿವು ಪಡಿಸಲು ನಿಶ್ಚಿತ ವಿಧಿಯ ಸ್ವೀಕೃತಿ ಮತ್ತು ನಿಷ್ಠೆ.

## ಧ

47. ಧರಣಿ - ಪದಾರ್ಥಾವಸ್ಥೆಯ ಅಣುಗಳಿಂದ ರಚಿತ ಬೃಹತ್ತ ರಚನೆ, ಅದರ ಮೇಲೆ ಪ್ರಾಣ ಜೀವಿ ಹಾಗು ಜ್ಞಾನ ಅವಸ್ಥೆ ಪ್ರಕಟವಾಗುವುದು.

## ನ

48. ನಶ್ವರತ್ವ - ಪರಿಣಾಮ ಪರಿವರ್ತನೆ ಶೀಲತೆ ಸಹಜ ಪರಂಪರೆ.

49. ನಿತ್ಯ ವೈಭವ - ಪ್ರತ್ಯೇಕ ಅವಸ್ಥೆ ಹಾಗು ಪದವಿ ತಮ್ಮ ಯಥಾಸ್ಥಿತಿಯಲ್ಲಿ ಸಹಜ ಪರಂಪರೆಯಲ್ಲಿ ವೈಭವ ಹಾಗು ನಿತ್ಯ ವರ್ತಮಾನ.

50. ನಿಯತಿ ಕ್ರಮ - ಪದಾರ್ಥಾವಸ್ಥೆಯಿಂದ ಪ್ರಾಣಾವಸ್ಥೆ, ಪ್ರಾಣಾವಸ್ಥೆಯಿಂದ ಜೀವಾವಸ್ಥೆ, ಜೀವಾವಸ್ಥೆಯಿಂದ ಜ್ಞಾನಾವಸ್ಥೆ ಸಹಜ ಪ್ರಕಟಣೆ ಪರಂಪರೆ ವಿಧಿಯಿಂದ ತ್ವ ಸಹಿತ ವ್ಯವಸ್ಥೆ.

51. ನಿಯತಿ ವಿಧಿ - ಪದಾರ್ಥ, ಪ್ರಾಣ, ಜೀವ, ಜ್ಞಾನಾವಸ್ಥೆಯ ನಿಶ್ಚಿತ ನಡತೆ

52. ನಿತ್ಯ - ನಿರಂತರ ಸದಾ ಸದಾ

53. ನಿಯಂತ್ರಣ - ತ್ವ ಸಹಿತ ವ್ಯವಸ್ಥೆ - ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸುವಿಕೆ.

54. ನಿಯಮ - ನಡತೆ

55. ನ್ಯಾಯ - ಸಂಬಂಧ, ಮೌಲ್ಯ, ಮೌಲಾಂಕನ ಉಭಯ ತೃಪ್ತಿ ಹಾಗು ನಿರಂತರತೆ.

## ಪ

56. ಪರಿಣಾಮ - ಪರಮಾಣುವಿನಲ್ಲಿ ಪರಿಣಾಮ. ಪರಮಾಣುವಿನಲ್ಲಿ ಅಂಶ ಸಂಖ್ಯೆ ಕಡಿಮೆ - ಹೆಚ್ಚಾಗುವುದು.

57. ಪ್ರಮಾಣ - ಪರಂಪರೆಯ ರೂಪದಲ್ಲಿ ಪ್ರಕಟವಾಗುತ್ತಿರುವುದು, ಪ್ರಕಟಣೆಯ ನಿರಂತರತೆ.

58. ಪ್ರಕೃತಿ - ಮೊದಲಿಂದಲೇ ಇರುವ ಪ್ರಮಾಣ ಮತ್ತು ಇರುವ ಸೂತ್ರ ವ್ಯಾಖ್ಯೆ ಸಂಪನ್ನತೆ.

59. ಪರಮಾಣು - ಹೆಚ್ಚು ಕಡಿಮೆಯಿಂದ ಮುಕ್ತಿ ತ್ವ ಸಹಿತ ವ್ಯವಸ್ಥೆ. ಸಮಗ್ರ ವ್ಯವಸ್ಥೆಯಲ್ಲಿ ಭಾಗವಹಿಸುವಿಕೆ - ಉಪಯುಕ್ತತೆ - ಪೂರಕತೆ ಸಹಜ ಮೂಲ ಘಟಕ - ಜಡ ಪ್ರಕೃತಿಯ ರೂಪದಲ್ಲಿ.

60. ಪ್ರಾಣಕೋಶ - ಪ್ರಾಣ ಸೂತ್ರ - ರಚನೆ ತತ್ವ - ಪುಷ್ಟಿ ತತ್ವದ ಸಂಯುಕ್ತ ರೂಪದಲ್ಲಿ ರಚಿತ ರಚನೆ ಮತ್ತು ಶ್ವಾಸ ನಿಶ್ವಾಸ ಸಹಿತ ರಚನೆ ವಿಧಿ ಸಹಜ ರಚನೆ ಪ್ರವೃತ್ತಿ ಸಂಪನ್ನ ಘಟಕ.

61. ಪದಾರ್ಥಾವಸ್ಥೆ - ಪದ ಭೇದದಿಂದ ಅರ್ಥ ಭೇದ ಪ್ರಕಟ ಮಾಡುವುದು

62. ಪ್ರಾಣಪದ ಚಕ್ರ - ಪದಾರ್ಥಾವಸ್ಥೆಯಿಂದ, ಪ್ರಾಣಾವಸ್ಥೆ, ಪ್ರಾಣಾವಸ್ಥೆಯಿಂದ ಪದಾರ್ಥಾವಸ್ಥೆಯಲ್ಲಿ ಪರಿಣಿತಿಗಳು.

| | |
|---|---|
| 63. ಪ್ರಲೋಭನೆ - | ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಇಂದ್ರಿಯಗಳ ಅನುಕೂಲತೆಯ ಪ್ರತಿ ಅಸಹಾಯಕತೆ. |
| 64. ಪ್ರಣೀತ - | ಪ್ರೇರಣೆ ಪಡೆಯುವ ಸೂತ್ರ. ಪರಿಪೂರ್ಣ ರೂಪದಲ್ಲಿ ಸ್ಥಿತಿ ಸತ್ಯ, ವಸ್ತುಸ್ಥಿತಿ ಸತ್ಯ, ವಸ್ತುಗತ ಸತ್ಯದ ರೂಪದಲ್ಲಿ ಸ್ಪಷ್ಟ ಮಾಡುವುದು. |

**ಫ**

| | |
|---|---|
| 65. ಫಲ - | ಯೋಜನೆಗಳ ಕ್ರಿಯಾನ್ವಯ ಮಾಡುವುದರಿಂದ ಸ್ಪಷ್ಟವಾದ ಉಪಲಬ್ಧಿಗಳು. |

**ಬ**

| | |
|---|---|
| 66. ಬ್ರಹ್ಮ - | ವ್ಯಾಪಕ ವಸ್ತುವಿನ ಹೆಸರು |
| 67. ಬಂಧನ - | ಭ್ರಮೆ ಅತಿವ್ಯಾಪ್ತಿ, ಅನಾವ್ಯಾಪ್ತಿ, ಅವ್ಯಾಪ್ತಿ ದೋಶ |

**ಭ**

| | |
|---|---|
| 68. ಭಾಗವಹಿಸುವಿಕೆ - | ಫಲ, ಪರಿಣಾಮವನ್ನು ಸ್ವೀಕರಿಸುವುದಕ್ಕಾಗಿ ಮಾಡಿರುವ ಕ್ರಿಯಾಕಲಾಪ |
| 69. ಭಯ - | ಜೀವ ಚೇತನ ವಶ ಸಂಬಂಧಗಳಲ್ಲಿ ವಿಶ್ವಾಸವಾಗದಿರುವುದು ಮತ್ತು ಪ್ರಮಾಣಿತವಾಗದಿರುವುದು. ಅಪೇಕ್ಷೆ ಇರುವುದು |
| 70. ಭೋಗೊನ್ಮಾದ - | ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇಂದ್ರಿಯಗಳಲ್ಲಿ ಅನುಕೂಲತೆ ಮಾಡಿಕೊಳ್ಳುವ ಪ್ರವೃತ್ತಿ ಹಾಗು ನಿರ್ಗತಿ |

71. ಭ್ರಾಂತಿ ಪದ - ಜೀವಿಗಳ ಸಮಾನ ಬಾಳುತ್ತಾ ಮಾನವನು ಭ್ರಮಿತ ಮಾನವ ಪದದಲ್ಲಿ ಇರುವುದು ಹಾಗು ಭ್ರಮಿತ ಮಾನವ ಪದದಿಂದ ಪುನಃ ಜೀವ ಚೇತನ ಪದಕ್ಕೆ ಬರುವ ಚಕ್ರ ಜೀವಾವಸ್ಥೆಯಿಂದ ಭ್ರಾಂತಿ ಮಾನವನ ರೂಪದಲ್ಲಿ ಇರುವುದು ಮತ್ತು ಭ್ರಾಂತಿಮಾನವ ಜೀವರೂಪದಲ್ಲಿ ಇರುವ ಆವರ್ತನ ಕ್ರಿಯೆ.

72. (*ಭೂಖೆ ಪರಮಾಣು*) ಹಸಿದ ಪರಮಾಣು - ತೃಪ್ತಿ ಪಡೆದಿರುವ ಪರಮಾಣುವಿನಲ್ಲಿ ಎಷ್ಟು ಸಂಖ್ಯಾತ್ಮಕ ಅಂಶಗಳು ಇರಬೇಕೋ ಅದಕ್ಕಿಂತ ಕಡಿಮೆ ಇರುವುದು.

73. ಭೌತಿಕ ವಸ್ತು - ಪರಮಾಣು ಅಣು ರಚಿತ ಸ್ವರೂಪದಲ್ಲಿ ವರ್ತಮಾನ.

## ಮ

74. ಮಾನವ – ಮನಾಕಾರವನ್ನು ಸಾಕಾರಗೊಳಿಸುವವನು ಮನಃ ಸ್ವಸ್ಥತೆಯನ್ನು ಪ್ರಮಾಣಿತ ಮಾಡುವವನು.

75. ಮಾನವೀಯತಾಪೂರ್ಣ ನಡತೆ – ಮೌಲ್ಯ, ಚಾರಿತ್ರ್ಯ, ನೈತಿಕತೆ ಸಹಜ ಪ್ರಮಾಣ ಪರಂಪರೆ.

76. ಮಧ್ಯಸ್ಥ ದರ್ಶನ - ಇರುವಿಕೆಯಲ್ಲಿ, ಇರುವಿಕೆಯಿಂದ, ಇರುವಿಕೆಗಾಗಿ ನಿರಂತರತೆ ಸಹಜ ಸೂತ್ರ ವ್ಯಾಖ್ಯೆ.

77. ಮೋಕ್ಷ - ಭ್ರಮೆ ಮುಕ್ತಿ, ಜಾಗೃತಿ.

78. ಮಾನವ ಮೌಲ್ಯ – ಧೀರತೆ, ವೀರತೆ, ಉದಾರತೆ, ದಯೆ, ಕೃಪೆ, ಕರುಣ.

79. ಮೌಲ್ಯ ಶಿಕ್ಷಣ - ಜೀವನ ಮೌಲ್ಯ – ಮಾನವ ಮೌಲ್ಯ – ಸ್ಥಾಪಿತ ಮೌಲ್ಯ –

ಶಿಷ್ಠ ಮೌಲ್ಯಗಳ ಕರ್ಮಾಭ್ಯಾಸ, ವ್ಯವಹಾರಾಭ್ಯಾಸ ಮಾಡುವ ಶಿಕ್ಷಣ ಕಾರ್ಯಕ್ರಮ.

## ಯ, ರ

80. ಯೋಜನೆ - ಯೋಗ ಸಂಯೋಗದಿಂದ ವಾಂಛಿತ ಉಪಲಬ್ಧಿಗಾಗಿ ನಿರ್ಣಯಿಸುವುದು.

81. ರಹಸ್ಯ - ಅರಿವಾಗದಿರುವುದು, ಸ್ಪಷ್ಟವಾಗದಿರುವುದು. ಕ್ರಿಯೆ ಮಾತ್ರವನ್ನು ಅರಿತುಕೊಳ್ಳುವುದರಲ್ಲಿರುವ ಅಪೂರ್ಣತೆಯೇ ರಹಸ್ಯ.

82. ರಾಸಾಯನಿಕ ವಸ್ತು - ಯೌಗಿಕ ಕ್ರಿಯೆಮೂಲಕ ಭೌತಿಕ ನದತೆಗಿಂತ ಭಿನ್ನ ನಡತೆಯಲ್ಲಿ ವರ್ತಮಾನವಾಗುವುದು (ಉದಾಹರಣೆಗೆ ನೀರು:- ಒಂದು ಉರಿಸುವುದರ ಒಂದು ಉರಿಯುವುದರ ಯೋಗವಾಗುವುದರಿಂದ ಬಾಯರಿಕೆಯನ್ನು ತಣಿಸುವ ವಸ್ತು ಉಂಟಾಗುವುದು).

83. ರಾಷ್ಟ್ರ – ಧರಣಿ ಸಹಜ ಅಖಂಡ ಸಮಾಜ ಸಾರ್ವತ್ರಿಕ ವ್ಯವಸ್ಥೆ ಸೂತ್ರ ವ್ಯಾಖ್ಯೆ.

84. ರಾಷ್ಟ್ರೀಯತೆ – ಅಖಂಡ ಸಮಾಜ ಸೂತ್ರ ವ್ಯಾಖ್ಯೆ

85. ರಾಷ್ಟ್ರೀಯ ಚಾರಿತ್ರ್ಯ – ಧರಣಿಯ ಮೇಲೆ ಅಖಂಡ ಸಮಾಜ ರೂಪದಲ್ಲಿ ಸಮಾಧಾನ ಸಮೃದ್ಧಿ ಅಭಯ ಸಹ ಅಸ್ತಿತ್ವ ಪ್ರಮಾಣ ಪರಂಪರೆ ರೂಪದಲ್ಲಿ ವೈಭವಿತವಾಗುವುದು

86. ರಚನೆ - ಧರಣಿಯಂತಹಾ ದೊಡ್ಡ ರಚನೆಯಲ್ಲೇ ಸಂಪೂರ್ಣ ಪ್ರಕಾರದ

ಹಸಿರು ವನ, ಗಿಡ, ಮರ, ವನಸ್ಪತಿಗಳು, ಔಷದಿಗಳು ಬೀಜವೃಕ್ಷ ವಿಧಿಯಿಂದ ಪರಂಪರೆ ರೂಪದಲ್ಲಿ ಸಂಪನ್ನ ಕ್ರಿಯಾಕಲಾಪ ಮತ್ತು ಜೀವಿ ಹಾಗು ಮಾನವ ರಚನೆಗಳು.

87. ರಸಾಯನ ತಂತ್ರ - ಭೂಮಿಯ ಮೇಲೆ ನೀರಿನ ಸಹಯೋಗವಾದಮೇಲೆ, ನೀರಿನಲ್ಲಿ ಕ್ಷಾರ ಮತ್ತು ಆಮ್ಲದ ಸಹಯೋಗದಿಂದ ಪುಷ್ಟಿ ತತ್ವ ರಚನೆ ತತ್ವದ ಪ್ರಕಟಣೆ. ಇದರಿಂದಲೇ ಉಂಟಾದ ಅನೇಕ ರಾಸಾಯನಿಕ ತತ್ವದ ಸಂಯುಕ್ತ ಕಾರ್ಯಕಲಾಪ

88. ರಾಕ್ಷಸ ಮಾನವ - ಜೀವ ಚೇತನ ಕ್ರಮದಲ್ಲಿ ಕ್ರೂರತೆಯಿಂದ ಬಾಳುವವನು

## ಲ

89. ಲಭೋನ್ಮಾದ – ಕಡಿಮೆ ಕೊಟ್ಟು ಹೆಚ್ಚು ಪಡೆಯುವ ದೃಷ್ಟಿ ಪ್ರವೃತ್ತಿ ಮತ್ತು ಕಾರ್ಯ

## ವ

90. ವಿಚಾರ – ಕ್ರಿಯಾನ್ವಯದಲ್ಲಿ ತರ್ಕ ಸಂಗತ ನಿಶ್ಚಯಗಳ ಸ್ವೀಕೃತಿ

91. ವಾದ – ವಿಶ್ಲೇಷಣೆ ಕಾರಣ ಗುಣದಿಂದ ಕೂಡಿ ಗಣಿತಾತ್ಮಕ ವಿಧಿಯಿಂದ ಪ್ರಮಾಣ ಮತ್ತು ವರ್ತಮಾನ

92. ವರ್ಣ - ಯಾವುದು ಯಾವ ಅವಸ್ಥೆಯ ಚೇತನ ವಿಧಿಯಿಂದ ಸಂಪನ್ನವಾಗಿರುತ್ತದೆಯೋ ಅದೇ ಅದರ ವರ್ಣ (ಜೀವ ಚೇತನ – ಮಾನವ ಚೇತನ – ದಿವ್ಯ ಚೇತನ)

93. ವಿಕಲ್ಪ - ಪರಂಪರೆ ಸಹಜ ಗತಿಯಲ್ಲಿ ಪ್ರಾಪ್ತಿಯಾಗಿರುವ ಸಮಸ್ಯೆಗಳ

ಸಮಾಧಾನ.

94. ವ್ಯಾಪಕ – ಸರ್ವತ್ರ ವಿದ್ಯಮಾನ – ಜಡ ಚೈತನ್ಯ ಪ್ರಕೃತಿಯಲ್ಲಿ, ಪ್ರಕೃತಿಯಿಂದ, ಪ್ರಕೃತಿಗಾಗಿ ಪ್ರಾಪ್ತ ಸಾಮ್ಯ ಊರ್ಜೆ.

95. ವರ್ತಮಾನ – ವರ್ತಿಸುತ್ತಲೇ ಇರುವುದು. ಸ್ಥಿತಿ-ಗತಿ ರೂಪದಲ್ಲಿ ಆಗುತ್ತಲಿರುವುದು.

96. ವ್ಯವಹಾರಾಭ್ಯಾಸ – ಸಂಬಂಧಗಳ ಜೊತೆಗೆ ಸಮಾಧಾನ ಸಮೃದ್ಧಿಯಿಂದ ಮೌಲ್ಯ ಚಾರಿತ್ರ್ಯ ನೈತಿಕತೆ ಸಹಿತ ಬಾಳುವ ಅಭ್ಯಾಸ

97. ವಿದ್ವತೆ - ಸ್ಥಿತಿ ಸತ್ಯ, ವಸ್ತು ಸ್ಥಿತಿ ಸತ್ಯ, ವಸ್ತುಗತ ಸತ್ಯ ಸಹಜ ಅನುಭವ ಪ್ರಮಾಣ, ಜ್ಞಾನ, ವಿವೇಕ, ವಿಜ್ಞಾನ ಸಂಪನ್ನತೆ ವರ್ತಮಾನ ಪ್ರಮಾಣ

98. ವಸ್ತು - ವಾಸ್ತವಿಕತೆ ಪ್ರಕಟವಾಗಿರುವುದು (ಇರುವುದು – ಇರುವುದರ ಮಹಿಮೆ ಉಪಯುಕ್ತತೆ – ಪೂರಕತೆ ಸಹಜ ಪ್ರಮಾಣ)

99. ವ್ಯವಹಾರವಾದ – ಸಂಬಂಧ, ಮೌಲ್ಯ, ಮೌಲ್ಯಾಂಕನ, ಉಭಯ ತೃಪ್ತಿ, ಸ್ವಧನ, ಸ್ವನಾರಿ – ಸ್ವಪುರುಷ, ದಯಾಪೂರ್ಣ ಕಾರ್ಯ ವ್ಯವಹಾರ, ತನ-ಮನ-ಧನ ರೂಪದ ಅರ್ಥದ ಸದುಪಯೋಗ, ರಕ್ಷಣೆ ಸಂಬಂಧಿತ ತರ್ಕದ ಪ್ರಯೋಜನೆ ಸಹಿತ ಕ್ರಿಯಾನ್ವಯನಕ್ಕಾಗಿ ಅವಶ್ಯಕವಾದ ಅಧ್ಯಯನ ಮತ್ತು ಸಂಭಾಷಣೆ.

100. ವಸ್ತು ಸ್ಥಿತಿ ಸತ್ಯ - ದೇಶ ಕಾಲ ದಿಶೆ ಸ್ಪಷ್ಟ

ವಸ್ತುಗತ ಸತ್ಯ - ರೂಪ ಗುಣ ಸ್ವಭಾವ ಧರ್ಮ ಸಹಜ ವರ್ತಮಾನ

## ಸ - ಶ

| | |
|---|---|
| 101. ಸಂಬಂಧ - | (೧) ಶರೀರ ಸಂಬಂಧ<br>(೨) ಮಾನವ ಸಂಬಂಧ<br>(೩) ಶಿಕ್ಷಣ ಸಂಬಂಧ<br>(೪) ವ್ಯವಸ್ಥೆ ಸಂಬಂಧ<br>(೫) ಉತ್ಪಾದನೆ ಸಂಬಂಧ<br>(೬) ವಿನಿಮಯ ಸಂಬಂಧ<br>(೭) ನೈಸರ್ಗಿಕ ಸಂಬಂಧ |
| 102. ಸ್ಥಿತಿ ಸತ್ಯ – | ಶೂನ್ಯದಲ್ಲಿ (ಸತ್ವ) ಸಂಪೃಕ್ತ (ನೆನೆದಿರುವ, ಮುಳುಗಿರುವ, ಆವರಿಸಿರುವ) ಪ್ರಕೃತಿ |
| 103. (ಸಮಜ್ದಾರಿ) ಅರಿವು – | ಜ್ಞಾನ ವಿವೇಕ ವಿಜ್ಞಾನ |
| 104. ಸಮರ್ಪಣೆ - | ತೆಗೆದುಕೊಳ್ಳುವ ಇಚ್ಛೆಯಿಂದ ಮುಕ್ತಿ ಪಡೆದ ಮೂಲ ಕ್ರಿಯೆ |
| 105. ಸಭ್ಯತೆ – | ವಿಧಿ ವ್ಯವಸ್ಥೆಯಲ್ಲಿ ಭಾಗವಹಿಸುವಿಕೆ, ವ್ಯವಸ್ಥೆಯ ಅರ್ಥದಲ್ಲಿ ಸೂತ್ರ ವ್ಯಾಖ್ಯೆ. ತಿಳಿವಳಿಕೆಯ ರೂಪದಲ್ಲಿ ಸೂತ್ರ, ಬಾಳುವ ರೂಪದಲ್ಲಿ ವ್ಯಾಖ್ಯೆ. |
| 106. ಸಂಸ್ಕೃತಿ – | ಪೂರ್ಣತೆಯ ಅರ್ಥದಲ್ಲಿ ಮಾಡುವ ಕ್ರಿಯಾಕಲಾಪ ಕಾರ್ಯ ವ್ಯವಹಾರ ಅಭಿವ್ಯಕ್ತಿ, ಸಂಪ್ರೇಷಣೆ, ಪ್ರಕಾಶನ |
| 107. ಸಮೃದ್ಧಿ – | ಕುಟುಂಬದ ಅವಶ್ಯಕತೆಗಿಂತ ಅಧಿಕ ಉತ್ಪಾದನೆ |
| 108. ಸಮಾಧಾನ – | ಅರಿವು – ಪ್ರಾಮಾಣಿಕತೆ – ಜವಾಬ್ದಾರಿ - ಭಾಗವಹಿಸುವಿಕೆ |

ಅರಿವಿನ ಅನುರೂಪ ಫಲ ಪರಿಣಾಮ ಅರಿವಿನ ಸಮ್ಮತವಾಗುವುದು

109. ಸ್ಥಾಪಿತ ಮೌಲ್ಯ- ೧. ವಿಶ್ವಾಸ
೨. ಮರ್ಯಾದೆ
೩. ಸ್ನೇಹ
೪. ಕೃತಜ್ಞತೆ
೫. ಗೌರವ
೬. ಶ್ರದ್ಧೆ
೭. ಮಮತೆ
೮. ವಾತ್ಸಲ್ಯ
೯.ಪ್ರೇಮ

110. ಸಂಪೃಕ್ತ – ವ್ಯಾಪಕ ಅಂತರ್ವ್ಯಾಪಿ ಪಾರದರ್ಶಿ ಸತ್ವದಲ್ಲಿ ಜಡ ಚೈತನ್ಯ ಪ್ರಕೃತಿ ಮುಳುಗಿದ್ದು – ನೆನೆದಿದ್ದು – ಆವೃತವಾಗಿದ್ದು ಪೂರ್ಣತೆಯ ಅರ್ಥದಲ್ಲಿ ಸಂಪೂರ್ಣದ ಅರ್ಥದಲ್ಲಿರುವುದು. ಪೂರ್ಣತೆ – ಸಂಘಟನೆಪೂರ್ಣತೆ ನಡತೆಪೂರ್ಣತೆ ಸಂಪೂರ್ಣತೆ = ಘಟಕ + ವಾತಾವರಣ.

111. ಸಾರ್ವತ್ರಿಕ ವ್ಯವಸ್ಥೆ – ಹತ್ತು ಸೋಪಾನಗಳ ಕುಟುಂಬ ಮೂಲಕ ಸ್ವರಾಜ್ಯ ವ್ಯವಸ್ಥೆ, ಇದರಲ್ಲಿ ಧನದ ವೆಚ್ಚೆಯಿಲ್ಲದೆ ಜನ ಪ್ರತಿನಿಧಿ ಸುಲಭವಾಗಿರುವುದು. ಎಲ್ಲಾ ಪ್ರತಿನಿಧಿಗಳು ಅರಿವು, ಸಮೃದ್ಧಿಯಿಂದ ಸಂಪನ್ನವಾಗಿರುವುದು, ಅರಿವು ಸಂಪನ್ನ ಸಮೃದ್ಧಿ ಸಹಿತ ಕುಟುಂಬದ ಪ್ರತಿನಿಧಿಯಾಗಿದ್ದು ಮಾನವೀಯ ಶಿಕ್ಷಣ ಸಂಸ್ಕಾರ, ನ್ಯಾಯ ರಕ್ಷಣೆ ಸಂಸ್ಕಾರ, ಉತ್ಪಾದನೆ ಕಾರ್ಯ ಸಂಸ್ಕಾರ, ವಿನಿಮಯ ಕಾರ್ಯ ಸಂಸ್ಕಾರ, ಸ್ವಾಸ್ಥ್ಯ ಸಂಯಮ ಸಂಸ್ಕಾರ ಕಾರ್ಯದಲ್ಲಿ ಭಾಗವಹಿಸುವಿಕೆ ಸಹಜ

ಕುಟುಂಬ ಪ್ರತಿನಿಧಿ ಚುನಾಯಿತ ಪರಂಪರೆ ರೂಪದಲ್ಲಿ ವರ್ತಮಾನವಾಗಿರುವುದು.

112. ಸಹ ಅಸ್ತಿತ್ವವಾದ – ಸತ್ವದಲ್ಲಿ (ಶೂನ್ಯದಲ್ಲಿ) ಸಂಪೃಕ್ತ ಜಡ ಚೈತನ್ಯ ಪ್ರಕೃತಿ ಸಹಜ ನಿತ್ಯ ಪ್ರಭಾವ ಗತಿವಿಧಿ ವರ್ತಮಾನವಾಗುವುದು.

113. ಸತ್ಯಾಪನೆ – ಸ್ವಯಂನಲ್ಲಿ, ಸ್ವಯಂನಿಂದ, ಸ್ವಯಂಗಾಗಿ, ಯಥಾಸ್ಥಿತಿ ಸಹಜ ವರ್ಣನೆ.

114. ಸಂಯಮ - ಅರಿವು, ಪ್ರಾಮಾಣಿಕತೆ, ಜವಾಬ್ದಾರಿ, ಭಾಗವಹಿಸುವಿಕೆಯ ಪ್ರಮಾಣ ಪರಂಪರೆ.

115. ಸಮಾಧಿ - "ಸ್ವ" ಇರುವ ಸ್ವೀಕೃತಿ ಹಾಗು ಆಸೆ, ವಿಚಾರ, ಇಚ್ಛೆ ಮೌನವಾಗಿರುವುದರ ದೃಷ್ಟನಾಗಿರುವ ರೂಪದಲ್ಲಿ ಸ್ವೀಕೃತಿ

116. ಸಾಧನ - ಸಾದ್ಯಕ್ಕಾಗಿ ಪ್ರಯಾಸ ಸಹಜ ಕ್ರಿಯಾಕಲಾಪ

117. ಸತ್ಯ - ಸತ್ವದಲ್ಲಿ ಸಂಪೃಕ್ತ ಪ್ರಕೃತಿ – ವ್ಯಾಪಕ ವಸ್ತುರೂಪಿ ಸತ್ವದಲ್ಲಿ ಸಂಪೃಕ್ತ ಜಡ ಚೈತನ್ಯ ಪ್ರಕೃತಿ ಸ್ಥಿತಿ ಸತ್ಯ – ವಸ್ತು ಸ್ಥಿತಿ ಸತ್ಯ – ವಸ್ತು ಗತ ಸತ್ಯ ಬೋಧ ಸಂಪನ್ನತೆ.

118. ಸಂತುಲನ - ಪದಾರ್ಥ ಅವಸ್ಥೆ, ಪ್ರಾಣ ಅವಸ್ಥೆ, ಜೀವ ಅವಸ್ಥೆ ಜ್ಞಾನ ಅವಸ್ಥೆಯಲ್ಲಿ ಪರಸ್ಪರ ಪೂರ್ಣತೆ – ಉಪಯುಕ್ತತೆ

119. ಸಹ – ಅಸ್ತಿತ್ವ – ಶೂನ್ಯದಲ್ಲಿ ಸಂಪೃಕ್ತ ಜಡ ಚೈತನ್ಯ ಪ್ರಕೃತಿ

120. ಸಹ ಅಸ್ತಿತ್ವದಲ್ಲಿ ವಿಕಾಸ ಕ್ರಮ – ಪರಮಾಣುವಿನಲ್ಲಿ ಅನೇಕ ಅಂಶಗಳ

121. ಸಹ ಅಸ್ತಿತ್ವದಲ್ಲಿ ವಿಕಾಸ - ಪರಮಾಣುವಿನಲ್ಲಿ ಸಂಘಟನೆಪೂರ್ಣತೆ

122. ಸಹ ಅಸ್ತಿತ್ವದಲ್ಲಿ ಜಾಗೃತಿ ಕ್ರಮ – ಶರೀರ ಹಾಗು, ಜೀವನದ ಸಹಿತ ಶರೀರವನ್ನು ನಂಬುತ್ತಾ ಬಾಳುತ್ತಿರುವ ಮಾನವ

123. ಸಹ ಅಸ್ತಿತ್ವದಲ್ಲಿ ಜಾಗೃತಿ - ಸತ್ವದಲ್ಲಿ ಸಂಪೃಕ್ತ (ಮುಳುಗಿರುವ– ನೆನೆದಿರುವ – ಆವೃತವಾಗಿರುವ) ಪ್ರಕೃತಿ ಸಹಜ ಜ್ಞಾನ ಅವಸ್ಥೆಯಲ್ಲಿ ಸಂಘಟನೆಪೂರ್ಣತೆ, ಕ್ರಿಯಾಪೂರ್ಣತೆ, ನಡತೆಪೂರ್ಣತೆ ಸಹಜ ಪ್ರಮಾಣ ಪರಂಪರೆಯಿದೆ.

124. ಸಹ ಅಸ್ತಿತ್ವದಲ್ಲಿ ಜಾಗೃತಿ ಸಹಜ ನಿರಂತರತೆ -

- ಜಾಗೃತ ಮಾನವ ಪರಂಪರೆ ಕ್ರಿಯಾಪೂರ್ಣತೆ–ನಡತೆಪೂರ್ಣತೆ ಸಹಜ ನಿರಂತರತೆ.
- ಸಮಾಧಾನ ಸಮೃದ್ಧಿ ಅಭಯ ಸಹ ಅಸ್ತಿತ್ವದಲ್ಲಿ ಅನುಭವ ಪ್ರಮಾಣ ಅದರ ನಿರಂತರತೆ
- ಅಖಂಡ ಸಮಾಜ ಸಾರ್ವತ್ರಿಕ ವ್ಯವಸ್ಥೆ ಸೂತ್ರ ವ್ಯಾಖ್ಯೆ ಅದರ ನಿರಂತರತೆ

125. ಶಾಸ್ತ್ರ – ಕಾಯಿಕ – ಮಾನಸಿಕ – ವಾಚಿಕ, ಕೃತ ಕಾರಿತ ಅನುಮೋದಿತ ಭೇದಗಳಲ್ಲಿ ಏಕಸೂತ್ರಾತ್ಮತೆ (ಒಂದಕ್ಕಿಂತ ಅಧಿಕ ಸರಣಿಗಳು)

126. ಶಿಕ್ಷಣ – ಸಂಸ್ಕಾರ - ಜ್ಞಾನ ವಿವೇಕ ವಿಜ್ಞಾನ ಸಂಪನ್ನತೆ

127. ಶಿಕ್ಷಣ – ತಂತ್ರ, ಉತ್ಪಾದನೆ ಕಾರ್ಯಕ್ಕಾಗಿ ಅವಶ್ಯವಾದ ಕೈಕಲೆಯ ಕರ್ಮಾಭ್ಯಾಸ

128. ಶ್ರಮ – ಶರೀರ ಮತ್ತು ಜೀವನದ ಸಂಯುಕ್ತ ರೂಪದಲ್ಲಿ ಬಾಳುತ್ತಿರುವ ಮಾನವ ಕುಶಲತೆ ನಿಪುಣತೆ ಪಾಂಡಿತ್ಯತೆಯಿಂದ ಉಪಯೋಗ ಮೌಲ್ಯ, ಕಲೆ ಮೌಲ್ಯವನ್ನು ಪ್ರಾಕೃತಿಕ ಐಶ್ವರ್ಯದ ಮೇಲೆ ಸ್ಥಾಪಿಸುವುದು.

## ಜ್ಞಾ

129. ಜ್ಞಾನ – ಸಹ ಅಸ್ತಿತ್ವ ರೂಪದಲ್ಲಿರುವ ಅಸ್ತಿತ್ವ ಜ್ಞಾನ, ಜೀವನ ಜ್ಞಾನ ಮತ್ತು ಮಾನವೀಯತೆ ಪೂರ್ಣ ನಡತೆ ಜ್ಞಾನ

130. ಜ್ಞಾತ – ಅರಿವಾಗುವುದು, ಪ್ರಮಾಣಿತವಾಗುವುದು

131. ಜ್ಞಾನಾವಸ್ಥೆ – ಜೀವ ಚೇತನಕ್ಕಿಂತ ಶ್ರೇಷ್ಠ ಮಾನವ ಚೇತನ, ಮಾನವ ಚೇತನಕ್ಕಿಂತ ಶ್ರೇಷ್ಠತರ್ ದೇವ ಚೇತನ, ದೇವ ಚೇತನಕ್ಕಿಂತ ಶ್ರೇಷ್ಠತಂ ದಿವ್ಯ ಚೇತನ ಸಹಜ ಮಾನವ ಪರಂಪರೆಯಿದೆ.

## ತ

132. ತೃಪ್ತ ಪರಮಾಣು - ಸಂಘಟನೆಪೂರ್ಣ ಪರಮಾಣು - ಪರಿಣಾಮದ ಅಮರತ್ವ ಸಂಪನ್ನ ಜೀವನ ಕ್ರಿಯಾಪೂರ್ಣತೆ - ನಡತೆಪೂರ್ಣತೆಗಾಗಿ ಉತ್ಸುಕವಾಗುವ ಸಂಘಟನೆಪೂರ್ಣ ಪರಮಾಣು - ಚೈತನ್ಯ ಘಟಕ.

| ಗ್ರಂಥ |
|---|
| **ಅಸ್ತಿತ್ವ ಮೂಲಕ ಮಾನವ ಕೇಂದ್ರಿತ ಚಿಂತನ** |
| **ಉಪನಾಮ** |
| **ಮಧ್ಯಸ್ಥ ದರ್ಶನ ಸಹ – ಅಸ್ತಿತ್ವವಾದ** |
| **ದರ್ಶನ (ಮಧ್ಯಸ್ಥ ದರ್ಶನ್)** |
| ೧. ಮಾನವ್ ವ್ಯವಹಾರ್ ದಾರ್ಶನ್<br>೨. ಮಾನವ್ ಕರ್ಮ್ ದರ್ಶನ್<br>೩. ಮಾನವ್ ಅಭ್ಯಾಸ್ ದರ್ಶನ್<br>೪. ಮಾನವ್ ಅನುಭವ್ ದರ್ಶನ್ |
| **ವಾದ (ಸಹ ಅಸ್ತಿತ್ವವಾದ್)** |
| ೧. ಸಮಾಧಾನಾತ್ಮಕ್ ಭೌತಿಕವಾದ್<br>೨ ವ್ಯವಹಾರಾತ್ಮಕ್ ಜನವಾದ್<br>೩. ಅನುಭವಾತ್ಮಕ್ ಅಧ್ಯಾತ್ಮವಾದ್ |
| **ಶಾಸ್ತ್ರ (ಅಸ್ತಿತ್ವ ಮೂಲಕ್ ಮಾನವ್ ಕೇಂದ್ರಿತ್ ಚಿಂತನ)** |
| ೧. ವ್ಯವಹಾರವಾದಿ ಸಮಾಜಶಾಸ್ತ್ರ್<br>೨. ಆವರ್ತನಶೀಲ ಅರ್ಥಶಾಸ್ತ್ರ್<br>೩. ಮಾನವ ಸಂಚೇತನಾವಾದಿ ಮನೋವಿಜ್ಞಾನ್ |
| **ಯೋಜನಾ** |
| ೧. ಜೀವನ್ ವಿಧ್ಯಾ ಯೋಜನಾ<br>೨. ಮಾನವ್ ಸಂಚೇತನಾವಾದಿ ಶಿಕ್ಷಾ-ಸಂಸ್ಕಾರ್ ಯೋಜನಾ<br>೩. ಪರಿವಾರ್ ಮೂಲಕ್ ಸ್ವರಾಜ್ಯ ವ್ಯವಸ್ಥ ಯೋಜನಾ |
| **ಸಂವಿಧಾನ** |
| ಮಾನವೀಯ ಆಚಾರ್ ಸಂಹಿತ ರೂಪಿ ಮಾನವೀಯ ಸಂವಿಧಾನ್ ಸೂತ್ರ ವ್ಯಾಖ್ಯ |
| **ಪರಿಭಾಷ** |
| ಪರಿಭಾಷ ಸಂಹಿತ |
| **ಅನ್ಯ** |
| ೧. ವಿಕಲ್ಪ್ ಏವಂ ಅಧ್ಯಯನ್ ಬಿಂದು<br>೨. ಆರೋಗ್ಯ ಶತಕ್ |